# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

## ಬೆಂಗಳೂರು

**ಹೆಚ್.ಆರ್.ಸಿ.ಸಂಖ್ಯೆ: 1135/10/31/2020(SB–3)**

**ದಿನಾಂಕ: 28–01–2022**

**ಉಪಸ್ಥಿತರು: ಶ್ರೀ ಆರ್.ಕೆ.ದತ್ತ, ಮಾನ್ಯ ಸದಸ್ಯರು**

**ದೂರುದಾರರು:**

ಶ್ರೀಮತಿ ಅರ್ಚನ
ಕೋಂ ಶ್ರೀ ನಾರಾಯಣಸ್ವಾಮಿ
ನಂ. 25/2, 18ನೇ ಅಡ್ಡ ರಸ್ತೆ,
ಮುನಿವೆಂಕಟಪ್ಪ ಲೇಔಟ್,
ಚರ್ಚ್ ರಸ್ತೆ, ಲಿಂಗರಾಜಪುರಂ,
ಬೆಂಗಳೂರು–560 084.

## ಆದೇಶ

ದೂರುದಾರರಾದ ಶ್ರೀಮತಿ ಅರ್ಚನ ಅವರು ಆಯೋಗಕ್ಕೆ ಸಲ್ಲಿಸಿರುವ ದೂರಿನಲ್ಲಿ ಆಕೆಯು ಶ್ರೀ ಆನಂದ್ ಎಂಬುವರ ಮನೆಯಲ್ಲಿ ಬಾಡಿಗೆಗೆ ಇದ್ದು, ಸದರಿ ಆನಂದ್ ರವರು ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಶ್ರೀ ಆನಂದ್ ರವರು ಅನಧಿಕೃತವಾಗಿ ಚೀಟಿ ವ್ಯವಹಾರ ನಡೆಸುತ್ತಿರುತ್ತಾರೆ. ಶ್ರೀ ಆನಂದ್ ರವರಿಂದ ದೂರುದಾರರು ಬಡ್ಡಿಗೆ ಹಣವನ್ನು ತೆಗೆದುಕೊಂಡಿದ್ದು, ಸದರಿ ಹಣವನ್ನು ನೀಡಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಶ್ರೀ ಆನಂದ್ ರವರು ತಮ್ಮ ಅಧಿಕಾರ ದುರುಪಯೋಗ ಪಡಿಸಿಕೊಂಡು ದೂರುದಾರರಾದ ಶ್ರೀಮತಿ ಅರ್ಚನ ಹಾಗೂ ಆಕೆಯ ಗಂಡನನ್ನು ಕೋಣನಕುಂಟೆ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಅಕ್ರಮ ಬಂಧನದಲ್ಲಿ ಇಟ್ಟಿರುವ ಬಗ್ಗೆ ಹಾಗೂ ಶ್ರೀ ಆನಂದ್ ರವರು ದೂರುದಾರರ ಮನೆಗೆ ಬೀಗ ಹಾಕಿದ್ದು, ಬೀಗದ ಕೀಲಿಯನ್ನು ಕೊಡದೇ ಇದ್ದು, ದೂರುದಾರರ ಮನೆಯಲ್ಲಿರುವ ವಸ್ತುಗಳನ್ನು ಹಿಂದಿರುಗಿಸಿ ಕೊಡಿಸುವುದರ ಬಗ್ಗೆ ಮತ್ತು ಸೂಕ್ತ ಕ್ರಮಕ್ಕಾಗಿ ಪ್ರಾರ್ಥಿಸಿರುತ್ತಾರೆ.

ಸದರಿ ದೂರರ್ಜಿಯ ಪ್ರತಿಯನ್ನು ಉಪ ಪೊಲೀಸ್ ಆಯುಕ್ತರು, ದಕ್ಷಿಣ ವಿಭಾಗ, ಬೆಂಗಳೂರು ರವರಿಗೆ ಕಳುಹಿಸಿ, ದೂರರ್ಜಿಗೆ ಸಂಬಂಧಿಸಿದಂತೆ ವರದಿ ನೀಡುವಂತೆ ಆದೇಶಿಸಿದ್ದು, ಅದರಂತೆ

ದಿನಾಂಕ.30.09.2020ರ ಪತ್ರದನ್ವಯ ವರದಿ ಹಾಗೂ ಕೋಣನಕುಂಟೆ ಪೊಲೀಸ್ ಇನ್ಸ್‌ಪೆಕ್ಟರ್ ರವರ ವರದಿ ಹಾಗೂ ಅದರೊಂದಿಗಿರುವ 'ಅಡಕಗಳನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಆರಕ್ಷಕ ನಿರೀಕ್ಷಕರು, ಕೋಣನಕುಂಟೆ ಪೊಲೀಸ್ ಠಾಣೆ ರವರು ವಿಚಾರಣೆ ಮಾಡಿದ್ದು, ವಿಚಾರಣಾ ಸಮಯದಲ್ಲಿ ಎದುರಾಳಿಯಾದ ಶ್ರೀ ಆನಂದ ರವರನ್ನು ಠಾಣೆಗೆ ಕರೆಸಿ ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡಿದ್ದು, ಅವರು ತಮ್ಮ ಹೇಳಿಕೆಯಲ್ಲಿ ಅರ್ಜಿದಾರರು ತಮ್ಮ ಮನೆಯಲ್ಲಿ ಹತ್ತು ವರ್ಷಗಳ ಹಿಂದೆ ಬಾಡಿಗೆಗೆ ವಾಸವಾಗಿರುತ್ತಾರೆ. ಈಕೆಯ ಗಂಡ ನಾರಾಯಣಸ್ವಾಮಿ ಆಟೋ ಚಾಲಕನಾಗಿದ್ದು ಜೊತೆಗೆ ಚೀಟಿ ವ್ಯವಹಾರ ಮತ್ತು ಫೈನಾನ್ಸ್ ವ್ಯವಹಾರವನ್ನು ತಮ್ಮ ಬಾಡಿಗೆ ಮನೆಯಲ್ಲಿ ನಡೆಸುತ್ತಿದ್ದ. ಹಾಗೂ ಎ.ಕೆ ಕಾಲೋನಿಗೆ ಹೋಗುವ ರಸ್ತೆಯಲ್ಲಿ ಆರಾಧನಾ ಫ್ಯಾಶನ್ಸ್ ಎಂಬ ಅಂಗಡಿಯನ್ನು ಸಹ ನಡೆಸುತ್ತಿದ್ದರು. ಗಂಡ ಹೆಂಡತಿ ಇಬ್ಬರು ನಮ್ಮ ಕುಟುಂಬದೊಂದಿಗೆ ನಂಬಿಕಸ್ಥರಾಗಿದ್ದು ಹಲವಾರು ಬಾರಿ ತಮ್ಮ ಕಷ್ಟದ ಸಮಯದಲ್ಲಿ ಹಣ ಪಡೆದು ವಾಪಸ್ ಕೊಡುತ್ತಿದ್ದರು. ಈ ಮಧ್ಯೆ ಕೆಲವು ಬಡಕೂಲಿ ಕೆಲಸ ಮಾಡುವ ಹೆಂಗಸರನ್ನು ನಂಬಿಸಿ ಅವರಿಂದ ಹಣ ಪಡೆಯುವುದಲ್ಲದೇ ಕೆಲವು ಕಾರ್ಯಕ್ರಮಗಳಿಗೆಂದು ಅವರನ್ನು ನಂಬಿಸಿ ಅವರಿಂದ ಚಿನ್ನದ ವಡವೆಗಳನ್ನು ಪಡೆದು ಕೊಂಡು ಅವುಗಳನ್ನು ಗಿರಿವಿ ಇಟ್ಟುಕೊಂಡು ಮೋಸ ಮಾಡುತ್ತಿರುತ್ತಾರೆ. ಹಾಗೂ ನನ್ನನ್ನು ಮತ್ತು ನನ್ನ ಹೆಂಡತಿ ಜ್ಯೋತಿಯನ್ನು ನಂಬಿಸಿ ರೂ.08 ಲಕ್ಷ ನಗದು ಹಾಗೂ ತನ್ನ ನಾದಿನಿಯ ಮದುವೆ ಇದೆಯೆಂದು ನಂಬಿಸಿ ನನ್ನ ಹೆಂಡತಿಯ ಚಿನ್ನದ ಸರವನ್ನು ಪಡೆದುಕೊಂಡು ಗಿರಿವಿ ಇಟ್ಟುಕೊಂಡಿದ್ದು ನಂತರ ವಿಚಾರ ಗೊತ್ತಾಗಿ ಅರ್ಚನ ರವರು ಗಿರಿವಿ ಇಟ್ಟಿದ್ದ ಆಭರಣವನ್ನು ಬಿಡಿಸಿಕೊಡದೇ ಇದ್ದರಿಂದ ತಾವು ಸದರಿ ಚಿನ್ನದ ಸರವನ್ನು ಬಿಡಿಸಿಕೊಂಡಿರುತ್ತೇವೆ.

ಈ ಮಧ್ಯೆ ದೊಡ್ಡಕಲ್ಲಸಂದ್ರ ನಿವಾಸಿಗಳಿಂದ ಸುಮಾರು 25 ಲಕ್ಷ ಹಣವನ್ನು ಸಾಲವಾಗಿ ಪಡೆದಿದ್ದು ಸಾಲ ತೀರಿಸಲಾಗದೇ ಅರ್ಚನ ರವರು ತಲೆ ಮರೆಸಿಕೊಂಡಿದ್ದು ಆಕೆಯ ಗಂಡ ನಾರಾಯಣಸ್ವಾಮಿ ರವರು ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ತನ್ನ ಹೆಂಡತಿ ಅರ್ಚನ ಕಾಣೆಯಾದ ಬಗ್ಗೆ ಕಂಪ್ಲೇಂಟ್ ಕೊಡಲು ಪ್ರಯತ್ನಿಸಿರುತ್ತಾನೆ. ಹಾಗೂ ತಾನು ಕೂಡ ಹಣ ಕೊಟ್ಟವರ ಸಂಪರ್ಕಕ್ಕೆ ಸಿಗುತ್ತಿರಲಿಲ್ಲ. ಈ ನಡುವೆ ದಿನಾಂಕ: 23.01.2020 ರಂದು ದೊಡ್ಡ ಕಲ್ಲಸಂದ್ರ ವಾಸಿ ಜಾಹ್ನವಿ @ ಸ್ವಪ್ನಾ ರವರು ನೀಡಿದ ದೂರಿನ ಮೇರೆಗೆ ಅರ್ಚನ ಮತ್ತು ಆಕೆಯ ಗಂಡನ ವಿರುದ್ಧ ಕೋಣನಕುಂಟೆ ಆರಕ್ಷಕ ಠಾಣೆ ಮೊ.ಸಂಖ್ಯೆ: 27/2020 ಕಲಂ 406, 420 ಐಪಿಸಿ ಮತ್ತು ಕಲಂ 76 ಚಿಟ್ ಫಂಡ್ಸ್ ಆಕ್ಟ್ ರೀತ್ಯ ಪ್ರಕರಣ ದಾಖಲಾಗಿದ್ದು ಕೇಸು ತನಿಖಾ ಹಂತದಲ್ಲಿರುತ್ತದೆ. ಈ ಪ್ರಕರಣದಲ್ಲಿ ಆರೋಪಿತರು ದಸ್ತಗಿರಿಯಾಗಿದ್ದು ಮಾನ್ಯ ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ತಾನು ತನ್ನ ಅಧಿಕಾರವನ್ನು ದುರಪಯೋಗಪಡಿಸಿಕೊಂಡು ಅರ್ಚನ ಮತ್ತು ಅವರ ಪತಿಯವರಾದ ನಾರಾಯಣಸ್ವಾಮಿಯವರಿಗೆ

ಯಾವುದೇ ತೊಂದರೆ ಕೊಟ್ಟಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಸಂಬಂಧ ಎದುರಾಳಿಗೆ ತಿಳುವಳಿಕೆ ನೀಡಿರುತ್ತದೆ. ಹಾಗೂ ಅರ್ಜಿದಾರರಿಗೆ ಇನ್ನು ಮುಂದೆ ಯಾವುದೇ ತೊಂದರೆ ಆಗದಂತೆ ಕ್ರಮ ಕೈಗೊಳ್ಳಲಾಗಿದೆ. ಈ ಬಗ್ಗೆ ಅರ್ಜಿದಾರರಿಗೆ ಸೂಕ್ತ ಹಿಂಬರಹ ನೀಡಿರುತ್ತದೆಂದು ವರದಿಯನ್ನು ಮಾಡಿದ್ದಾರೆ.

ಸದರಿ ವರದಿಯ ಪ್ರತಿಯನ್ನು ದೂರುದಾರರ ಅಭಿಪ್ರಾಯಕ್ಕಾಗಿ ಕಳುಹಿಸಿದ್ದು, ದಿನಾಂಕ: 04.01.2021 ರಂದು ದೂರುದಾರರು ಅವರ ಅಭಿಪ್ರಾಯವನ್ನು ಕೆಳಕಂಡಂತೆ ಸಲ್ಲಿಸಿದ್ದಾರೆ:-

"1. ನನ್ನನ್ನು ಮಹಿಳೆಯೆಂದು ನೋಡದೆ ಮೂರು ದಿನ ಆರಕ್ಷಕ ಠಾಣೆಯಲ್ಲಿ ಇಟ್ಟಿರುತ್ತಾರೆ ಮತ್ತು ನನ್ನನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆಯನ್ನು ಪಿ.ಎಸ್.ಐ ವೆಂಕಟೇಶಯ್ಯ ನೀಡಿರುತ್ತಾರೆ.
2. ಸಂಜೆ 06 ಗಂಟೆಯ ನಂತರ ಮಹಿಳೆಯನ್ನು ಬಂಧಿಸುವಂತಿಲ್ಲ ನನ್ನನ್ನು 06.30 ಸಂಜೆ ಬಂಧಿಸಿ ಸ್ಟೇಟ್ ಹೋಮ್ ಅಲ್ಲಿ ಎರಡು ದಿನಗಳ ಕಾಲ ಇಟ್ಟಿರುತ್ತಾರೆ.
3. ಮೊದಲು ದೂರುದಾರರು ನಾವಾಗಿದ್ದು ನಮ್ಮ ಅರ್ಜಿಯನ್ನು ಕೋಣನಕುಂಟೆ ಆರಕ್ಷಕ ಠಾಣೆ ನಿರಾಕರಿಸಿ ಆನಂದ್ ಮತ್ತು ಆತನ ಹೆಂಡತಿಯ ಗೆಳತಿ ಜಾನವಿಯವರ ಕೇಸನ್ನು ದಾಖಲಿಸಿರುತ್ತಾರೆ.
4. ಜನವರಿ 2020-21 01 ವರ್ಷದ ಅವಧಿಯಿಂದ ಮನೆಯ ಗೃಹ ಬಳಕೆಯ ವಸ್ತುಗಳನ್ನು ಕೋಣನಕುಂಟೆ ಠಾಣೆಯಲ್ಲಿ ಕೊಡಿಸಿಕೊಡಿ ಎಂದು ಡಾ॥ ಸುದರ್ಶನ್ ಐಎಚ್ಆರ್ಎ ಲೀಗಲ್ ಅಡ್ವೈಸರ್ ವಿನಂತಿ ಮಾಡಿದಾಗಲೂ ಅವರು ನಮಗೆ ಯಾವುದೇ ರಕ್ಷಣೆ ನೀಡಿರುವುದಿಲ್ಲ.
5. 20 ಫೆಬ್ರವರಿ 2020 ಪಿ.ಎಸ್.ಐ ವೆಂಕಟೇಶಯ್ಯ ಆನಂದ್‌ರವರ ಹಣವನ್ನು ಕೊಡು ನಿನ್ನ ಕೇಸನ್ನು ಬಿ ವರದಿ ಮಾಡುತ್ತೇನೆ ಎಂದು ಬೆದರಿಸಿರುತ್ತಾನೆ. ರಾಮಕೃಷ್ಣ ಎಂಬುವವರು ನನ್ನ ಮೂಲಕ ರೂ. 1,50,000/-ಗಳನ್ನು ಆನಂದ್ ರವರ ಹೆಂಡತಿಯಾದ ಜ್ಯೋತಿ ಬಳಿಯಿಂದ ಪಡೆದಿರುತ್ತಾರೆ. ಜ್ಯೋತಿಯವರು ಬಡ್ಡಿಯನ್ನು ಹಣವನ್ನು ಹಿಂದಕ್ಕೆ ಕೊಡಿಸು ಎಂದು ಅವಾಚ್ಯ ಶಬ್ಧಗಳಿಂದ ನನ್ನನ್ನು ಬೈಯಲು ರಾಮಕೃಷ್ಣ ತನ್ನ ಹೆಂಡತಿಯ ಒಡವೆಗಳನ್ನು ಅರ್ಚನಾರವರು ನಾದಿನಿ ಮದುವೆಗೆ ಹೋಗಲು ಬೇಕೆಂದು ಹೆಂಡತಿ ಬಳಿ ಸುಳ್ಳು ಹೇಳಿ ನನ್ನ ಮೂಲಕ ಅದನ್ನು ಮಣಪ್ಪುರಂನಲ್ಲಿ ಗಿರವಿ ಇಟ್ಟರಿಸಿರುತ್ತಾರೆ. ಅದನ್ನು ವೆಂಕಟೇಶಯ್ಯ ನಾನೇ ಇಟ್ಟಿದ್ದೇನೆ ಎಂದು ಕೇಸ್ ತಿರುಗಿಸಿ ಐ.ಪಿ.ಸಿ 406 ಕೇಸ್ ದಾಖಲಿಸಿ ಮಾರ್ಚ್ 04.08.2020 ರಂದು ಠಾಣೆಗೆ ಕರೆಸಿ ಅವನಿಗೆ ಬರವಣಿಗೆಯಲ್ಲಿ ಬರೆದುಕೊಡು ಎಂದು ಬೆದರಿಸಿ ಇಲ್ಲವಾದರೆ ನಿನ್ನ ಮತ್ತು ನಿನ್ನ ಗಂಡನನ್ನು ಮತ್ತೆ ಜೈಲಿಗೆ ಕಳುಹಿಸುತ್ತೇನೆ ಎಂದು ಬೆದರಿಸಿ ಆಗಸ್ಟ್ 04 2020 ರಂದು ಹಣವನ್ನು ಕೊಡುತ್ತೇನೆಂದು ಬರೆಸಿಕೊಂಡಿರುತ್ತಾರೆ.
6. ನಮ್ಮ ಕೇಸನ್ನು ನ್ಯಾಯಾಲಯಕ್ಕೆ ಇದುವರೆವಿಗೂ ಕಳುಹಿಸದೇ ಬಿ ವರದಿ ಮಾಡದೆ ಹಾಗೆಯೇ ಇಟ್ಟು ಕೊಂಡಿರುತ್ತಾರೆ. ನಮ್ಮ ಮೇಲೆ ಹಾಕಿರುವ ಆರೋಪಗಳನ್ನು ಸಾಕ್ಷಿ

ಸಹಿತವಾಗಿ ಕೊಡಲಿ ಇನ್ನು ಇಷ್ಟು ಲೋಪ ದೋಷಗಳನ್ನು ಇಟ್ಟುಕೊಂಡು ಇವರು ನಮಗೆ ಯಾವ ಅನ್ಯಾಯವನ್ನು ಮಾಡಿರುವುದಿಲ್ಲವೆಂದು ಈ ಮೂಲಕ ನಿಮಗೆ ತಿಳಿಸುತ್ತೇನೆ.

7. ನಮಗೆ ಕೋಣನಕುಂಟೆ ಆರಕ್ಷಕ ಠಾಣೆಯಲ್ಲಿ ಆಗಲಿ ಡಿ.ಸಿ.ಪಿ ದಕ್ಷಿಣದಲ್ಲಾಗಲಿ ನ್ಯಾಯವು ಸಿಗದ ಕಾರಣ ನಿಮ್ಮ ಹೆಚ್.ಆರ್.ಸಿ ಮೂಲಕ ದೂರು ದಾಖಲಿಸಿರುತ್ತೇನೆ. ದಯಮಿಟ್ಟು ನಮಗೆ ನ್ಯಾಯವನ್ನು ಕೊಡಿಸಿ ಎಂದು ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ."

ದೂರು, ವರದಿ ಮತ್ತು ಅಭಿಪ್ರಾಯವನ್ನು ಪರಿಶೀಲಿಸಲಾಗಿ, ಸದರಿ ಪ್ರಕರಣವನ್ನು ಆಯೋಗದ ತನಿಖಾ ತಂಡದಿಂದ ಮರುವಿಚಾರಣೆ ನಡೆಸಲು ನಿರ್ಣಯಿಸಿ, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು, ವರದಿ ಮತ್ತು ದೂರುದಾರರು ಸಲ್ಲಿಸಿರುವ ಅಭಿಪ್ರಾಯವನ್ನು ಆರಕ್ಷಕ ಮಹಾನಿರೀಕ್ಷಕರು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ಅವರಿಗೆ ಕಳುಹಿಸಿ, ಈ ಬಗ್ಗೆ ಪರಿಶೀಲಿಸಿ ವಿಚಾರಣಾ ವರದಿಯನ್ನು ಸ್ಪಷ್ಟ ಅಭಿಪ್ರಾಯದೊಂದಿಗೆ ಆಯೋಗಕ್ಕೆ ಸಲ್ಲಿಸುವಂತೆ ಸೂಚಿಸಿದ್ದು, ಆಯೋಗದ ಐಜಿಪಿ ರವರ ವರದಿಯಲ್ಲಿ ದೂರುದಾರರ ಆರೋಪಕ್ಕೆ ಸಂಬಂಧಿಸಿದಂತೆ ಪೊಲೀಸ್ ಹೆಡ್‌ಕಾನ್ಸ್‌ಟೇಬಲ್ ಆನಂದ್ ಎಂ ರವರನ್ನು ವಿಚಾರ ಮಾಡಲಾಗಿ ಶ್ರೀಮತಿ ಅರ್ಚನ ಮತ್ತು ಆಕೆಯ ಗಂಡ ನಾರಾಯಣಸ್ವಾಮಿ ಹಾಗೂ ಅವರ ಮಗಳಾದ ಆರಾಧನ ಎಂಬುವವರೊಂದಿಗೆ ನಮ್ಮ ಮನೆಯ 1ನೇ ಮಹಡಿಯಲ್ಲಿ ಬಾಡಿಗೆಗೆ ವಾಸವಿದ್ದರು. ಶ್ರೀ ನಾರಾಯಣಸ್ವಾಮಿ ಹಾಗೂ ಅವರ ಹೆಂಡತಿ ಶ್ರೀಮತಿ ಅರ್ಚನ ರವರು ಚೀಟಿ ವ್ಯವಹಾರ ಮತ್ತು ಫೈನಾನ್ಸ್ ವ್ಯವಹಾರವನ್ನು ಸಹ ಮಾಡಿಕೊಂಡಿದ್ದರು. ಪ್ರಾರಂಭದಲ್ಲಿ ಇವರು ನಮ್ಮ ಕಟ್ಟಡದಲ್ಲಿ ಬಾಡಿಗೆಗೆ ಇದ್ದ ಮನೆಯಲ್ಲಿ ಜನರನ್ನು ಸೇರಿಸಿಕೊಂಡು ಚೀಟಿ ವ್ಯವಹಾರವನ್ನು ಮಾಡಲು ಪ್ರಾರಂಭಿಸಿದ್ದು, ಇದಕ್ಕೆ ನಾವು ಆಕ್ಷೇಪ ವ್ಯಕ್ತಪಡಿಸಿದಾಗ ದೊಡ್ಡಕಲ್ಲಸಂದ್ರದಲ್ಲಿ ಅವರು ನಡೆಸುತ್ತಿದ್ದ ಆರಾಧನಾ ಪ್ಯಾಷನ್ಸ್ ಎಂಬ ಫಾನ್ಸಿ ಅಂಗಡಿಯಲ್ಲಿ ಚೀಟಿ ವ್ಯವಹಾರವನ್ನು ಮುಂದುವರೆಸಿ ನಡೆಸಿಕೊಂಡಿದ್ದರು. ನಂತರ ಅವರ ವೈಯಕ್ತಿಕ ಕಾರಣಗಳಿಗಾಗಿ ನಮ್ಮಿಂದ ಹಂತ ಹಂತವಾಗಿ ಒಟ್ಟು ರೂ.8,00,000/– ಗಳನ್ನು ಸಾಲ ಪಡೆದುಕೊಂಡಿದ್ದು, ಅದನ್ನು ವಾಪಾಸ್ ನೀಡಿರುವುದಿಲ್ಲ. ಹಾಗೂ ಇವರು ಅನಧಿಕೃತವಾಗಿ ಚೀಟಿ ವ್ಯವಹಾರವನ್ನು ಮಾಡುತ್ತಿದ್ದು, ತಮ್ಮ ಚೀಟಿ ಮೆಂಬರ್‌ಗಳಿಗೆ ಕೊಡಬೇಕಾಗಿದ್ದ ರೂ.66,46,200/– ಗಳನ್ನು ಸಹ ಬಾಕಿ ಉಳಿಸಿಕೊಂಡಿದ್ದರಿಂದ ನಾವುಗಳೆಲ್ಲರೂ ಸೇರಿ ಅರ್ಚನ ಹಾಗೂ ನಾರಾಯಣಸ್ವಾಮಿ ರವರುಗಳ ವಿರುದ್ಧ ದಿನಾಂಕ.23.01.2020 ರಂದು ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಪ್ರಕರಣ ದಾಖಲಾಗಿರುತ್ತದೆ. ನಂತರ ಪೊಲೀಸರು ಅವರುಗಳನ್ನು ಪ್ರಕರಣದಲ್ಲಿ ವಿಚಾರಣೆ ಮಾಡಿ ದಸ್ತಗಿರಿ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ದೂರುದಾರರು ಹಾಜರುಪಡಿಸಿದ್ದ ಆಡಿಯೋಕ್ಲಿಪ್‌ನ್ನು ಆಲಿಸಿದ್ದು, ಸದರಿ ಆಡಿಯೋ ಕ್ಲಿಪ್‌ನಲ್ಲಿರುವ ಮಾತುಗಳನ್ನು ನಾನು ಕೋಣನಕುಂಟೆ ಪೊಲೀಸ್ ಠಾಣೆಯ ಪೊಲೀಸ್

ಇನ್ಸ್‌ಪೆಕ್ಟರ್ ರವರು ದಿನಾಂಕ.23.01.2020 ರಂದು ನನ್ನ ಹಾಗೂ ಇತರೆ ಹಣ ಕೊಟ್ಟು ಮೋಸ ಹೋಗಿರುವ 15ಕ್ಕೂ ಹೆಚ್ಚು ಜನರನ್ನು ವಿಚಾರಣೆ ಮಾಡುವ ಸಮಯದಲ್ಲಿ ಶ್ರೀಮತಿ ಅರ್ಚನ ಹಾಗೂ ಅವರ ಗಂಡ ನಾರಾಯಣಸ್ವಾಮಿರವರು ನನ್ನಿಂದ ಸಾಲ ತೆಗೆದುಕೊಂಡು ವಾಪಸ್ ನೀಡದೇ ಇದ್ದುದರಿಂದ ಈ ರೀತಿಯಾಗಿ ಲೋಕಾರೂಡಿಯಾಗಿ ಮಾತನಾಡಿರುತ್ತೇನೆ. ಆದರೆ ಅವರಿಗೆ ನಾನು ಯಾವುದೇ ರೀತಿಯಲ್ಲಿ ಬೆದರಿಕೆ ಹಾಕುವುದಾಗಲೀ ಹಲ್ಲೆ ಮಾಡುವುದಾಗಲೀ ಮಾಡಿರುವುದಿಲ್ಲ. ಅವರು ಮಾಡಿರುವ ಎಲ್ಲಾ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತದೆ ಎಂದು ಹೇಳಿಕೆಯನ್ನು ನೀಡಿರುತ್ತಾರೆ.

ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಶ್ರೀ ವೆಂಕಟೇಶಯ್ಯ ರವರನ್ನು ವಿಚಾರಣೆ ಮಾಡಲಾಗಿ ದಿನಾಂಕ.23.01.2020 ರಂದು ಸಂಜೆ 04–00 ಗಂಟೆಯ ಸಮಯದಲ್ಲಿ ಶ್ರೀಮತಿ ಜಾಹ್ನವಿ @ ಸ್ವಪ್ನ ಎಂಬುವರು ಹಾಗೂ ಅವರ ಜೊತೆಯಲ್ಲಿ ಸುಮಾರು 15 ಕ್ಕೂ ಹೆಚ್ಚು ಜನರು ಶ್ರೀಮತಿ ಅರ್ಚನ ಮತ್ತು ನಾರಾಯಣಸ್ವಾಮಿ ರವರನ್ನು ಠಾಣೆಗೆ ಕರೆದುಕೊಂಡು ಬಂದು ಹಾಜರುಪಡಿಸಿ ಇವರುಗಳು ನಮ್ಮಿಂದ ಚೀಟಿಯನ್ನು ಕಟ್ಟಿಸಿಕೊಂಡಿದ್ದು, ನಮಗೆ ಚೀಟಿ ಹಣ ಒಟ್ಟು 66,46,200/- ರೂಗಳ ಹಣವನ್ನು ಕೊಡದೇ ಮೋಸ ಮಾಡಿರುತ್ತಾರೆ. ಆದ್ದರಿಂದ ಶ್ರೀ ಧರ್ಮೇಂದ್ರ, ಪೊಲೀಸ್ ಇನ್ಸ್‌ಪೆಕ್ಟರ್ ರವರ ಬಳಿ ದೂರನ್ನು ನೀಡಿದ್ದು, ಪೊಲೀಸ್ ಇನ್ಸ್‌ಪೆಕ್ಟರ್ ರವರು ನನಗೆ ಸದರಿ ದೂರನ್ನು ಪರಿಶೀಲಿಸಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳುವಂತೆ ಸೂಚಿಸಿದ ಮೇರೆಗೆ ಠಾಣಾ ಮೊ.ಸಂ.27/2020 ಕಲಂ 406, 420 ಐಪಿಸಿ ಮತ್ತು ಕಲಂ 76 ಚಿಟ್ ಫಂಡ್ ಆಕ್ಟ್ ರೀತ್ಯ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿರುತ್ತೇನೆ. ನಂತರ ನಾನು ಸದರಿ ಪ್ರಕರಣದಲ್ಲಿ ಆರೋಪಿತರಾದ ಅರ್ಚನ ಮತ್ತು ನಾರಾಯಣಸ್ವಾಮಿ ರವರುಗಳನ್ನು ವಿಚಾರಣೆ ಮಾಡುತ್ತಿದ್ದ ಸಮಯದಲ್ಲಿ ಪಿರ್ಯಾದುದಾರೊಂದಿಗೆ ಬಂದಿದ್ದ ಸುಮಾರು 15 ಕ್ಕೂ ಹೆಚ್ಚು ಜನರು ಶ್ರೀಮತಿ ಅರ್ಚನ ರವರು ನಮಗೆ ಚೀಟಿ ಹಣ ಕೊಡದೆ ಮೋಸ ಮಾಡಿರುತ್ತಾರೆ. ಅವರನ್ನು ನೀವು ಬಿಡುಗಡೆ ಮಾಡಿದರೆ ಅವರು ತಲೆಮರೆಸಿಕೊಳ್ಳುತ್ತಾರೆ. ನೀವು ಬಿಟ್ಟರೂ ನಾವು ಅವರುಗಳನ್ನು ಬಿಡುವುದಿಲ್ಲ ಎಂದು ಹೇಳುತ್ತಿದ್ದರಿಂದ ನಮ್ಮ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಧರ್ಮೇಂದ್ರ ಟಿ.ಎಂ ರವರ ಸೂಚನೆಯನ್ವಯ ಸದರಿ ಪ್ರಕರಣದಲ್ಲಿ ತನಿಖೆಗೆ ಅವಶ್ಯಕತೆ ಇದ್ದ ಆರೋಪಿ ಶ್ರೀಮತಿ ಅರ್ಚನಾರವರನ್ನು ಆಕೆಯ ಸುರಕ್ಷತೆಯ ಸಲುವಾಗಿ ಆ ದಿನ ದಿನಾಂಕ.23.01.2020 ರಂದು ಮಹಿಳಾ ಸಿಬ್ಬಂದಿಗಳ ಸುರಕ್ಷಿತ ಬೆಂಗಾವಲಿನಲ್ಲಿ ರಾಜ್ಯ ಮಹಿಳಾ ನಿಲಯದಲ್ಲಿರಿಸಿರುತ್ತದೆ. ಆಕೆಯ ಗಂಡ ಆರೋಪಿ ನಾರಾಯಣಸ್ವಾಮಿಯನ್ನು ಮರುದಿನ ಬೆಳಿಗ್ಗೆ ವಿಚಾರಣೆಗಾಗಿ ಠಾಣೆಗೆ ಹಾಜರಾಗುವಂತೆ ಸೂಕ್ತ ತಿಳುವಳಿಕೆ ನೀಡಿ ಠಾಣೆಯಿಂದ ಮನೆಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ದಿನಾಂಕ. 24.01.2020ರಂದು ಮೇಲ್ಕಂಡ ಪ್ರಕರಣದ ಆರೋಪಿಯಾದ ಶ್ರೀಮತಿ ಅರ್ಚನ ರವರನ್ನು ಹಾಗೂ ಅವರ ಪತಿ ನಾರಾಯಣಸ್ವಾಮಿ

ರವರನ್ನು ವಿಚಾರಣೆ ಮಾಡಿ, ಅವರಿಬ್ಬರನ್ನೂ ದಸ್ತಗಿರಿ ಮಾಡಿದ್ದು, ಆ ದಿನ ಅವರುಗಳ ವಿಚಾರಣೆ ಮುಗಿಯದ ಕಾರಣ ರಾತ್ರಿ ಅವೇಳೆಯಾದ್ದರಿಂದ ಆರೋಪಿ ಶ್ರೀಮತಿ ಅರ್ಚನ ರವರನ್ನು ರಾಜ್ಯ ಮಹಿಳಾ ನಿಲಯದಲ್ಲಿರಿಸಿರುತ್ತದೆ. ಹಾಗೂ ಆಕೆಯ ಪತಿ ಶ್ರೀ ನಾರಾಯಣಸ್ವಾಮಿ ರವರನ್ನು ಠಾಣೆಯ ಲಾಕಪ್‌ನಲ್ಲಿ ಸುರಕ್ಷಿತವಾಗಿ ಇರಿಸಿರುತ್ತದೆ. ನಂತರ ದಿನಾಂಕ.25.01.2020 ರಂದು ಸದರಿಯವರಿಬ್ಬರನ್ನೂ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿರುತ್ತದೆ. ನಂತರ ಸದರಿ ಪ್ರಕರಣದ ತನಿಖೆಯನ್ನು ಮುಂದುವರೆಸಿರುತ್ತೇನೆ. ಆರೋಪಿಗಳಿಗೆ ಮಾನ್ಯ ನ್ಯಾಯಾಲಯವು ಷರತ್ತುಬದ್ಧ ಜಾಮೀನನ್ನು ಮಂಜೂರು ಮಾಡಿದ್ದು, ಸದರಿ ಜಾಮೀನಿನ ಆದೇಶದ ಪ್ರತಿಯನ್ನು ಮಾನ್ಯ ನ್ಯಾಯಾಲಯವು ಸದರಿ ಆರೋಪಿಗಳಿಗೆ ಪ್ರತಿ 15 ದಿನಗಳಿಗೊಮ್ಮೆ ಕೋಣನಕುಂಟೆ ಪೊಲೀಸ್ ಠಾಣೆಗೆ ಹೋಗಿ ಸಹಿ ಮಾಡಿ ತನಿಖೆಗೆ ಸಹಕರಿಸುವಂತೆ ಸೂಚಿಸಿದ್ದು, ಆದರೆ ಸದರಿ ಆರೋಪಿಗಳು ಇದುವರೆಗೂ ಸಹಿ ಮಾಡಲು ನಮ್ಮ ಠಾಣೆಗೆ ಬಂದಿರುವುದಿಲ್ಲ. ಹಾಗೂ ತನಿಖೆಗೆ ಸಹಕರಿಸಿರುವುದಿಲ್ಲ. ಮಾನ್ಯ ಆಯೋಗದ ಅರ್ಜಿದಾರರಾದ ಶ್ರೀಮತಿ ಅರ್ಚನ ರವರು ಮಾನ್ಯ ಆಯೋಗದಲ್ಲಿ ನೀಡಿರುವ ದೂರು ಅರ್ಜಿಯಲ್ಲಿ ತಿಳಿಸಿರುವಂತೆ ನಾನು ಮತ್ತು ಸಿಬ್ಬಂದಿಗಳು ಸದರಿ ಅರ್ಚನ ಹಾಗೂ ಅವರ ಗಂಡ ಶ್ರೀ ನಾರಾಯಣಸ್ವಾಮಿ ರವರನ್ನು ಯಾವುದೇ ರೀತಿ ಅಕ್ರಮ ಬಂಧನದಲ್ಲಿರಿಸಿರುವುದಿಲ್ಲ ಹಾಗೂ ಅವರುಗಳಿಗೆ ಮಾನಸಿಕ ಮತ್ತು ದೈಹಿಕವಾಗಿ ಯಾವುದೇ ರೀತಿ ಕಿರುಕುಳ ನೀಡಿರುವುದಿಲ್ಲ. ಅರ್ಜಿದಾರರು ನನ್ನ ವಿರುದ್ಧ ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತದೆ ಎಂದು ಹೇಳಿಕೆಯನ್ನು ನೀಡಿರುತ್ತಾರೆ.

ಶ್ರೀ ಧರ್ಮೇಂದ್ರ, ಪೊಲೀಸ್ ಇನ್ಸ್‌ಪೆಕ್ಟರ್ ರವರನ್ನು ವಿಚಾರಣೆ ಮಾಡಲಾಗಿ ದಿನಾಂಕ.23.01.2020 ರಂದು ನಾನು ಬೆಳಿಗ್ಗೆ 09-00 ಗಂಟೆಗೆ ಠಾಣೆಗೆ ಕರ್ತವ್ಯಕ್ಕೆ ಬಂದು ತನಿಖೆಯ ಸಲುವಾಗಿ ಹೊರಗೆ ಹೋಗಿದ್ದು ಸಂಜೆ ಸುಮಾರು 4-00 ಗಂಟೆಯ ಸಮಯದಲ್ಲಿ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಶ್ರೀ ವೆಂಕಟೇಶಯ್ಯ ರವರು ಶ್ರೀಮತಿ ಜಾಹ್ನವಿ @ ಸ್ವಪ್ನ ಹಾಗೂ ಇತರರು, ಶ್ರೀಮತಿ ಅರ್ಚನ ಮತ್ತು ಅವರ ಗಂಡ ನಾರಾಯಣಸ್ವಾಮಿ ರವರುಗಳೊಂದಿಗೆ ಠಾಣೆಗೆ ದೂರು ನೀಡಲು ಬಂದಿರುವ ವಿಚಾರವನ್ನು ತಿಳಿಸಿದ್ದು, ನಾನು ಅವರಿಗೆ ದೂರನ್ನು ಪರಿಶೀಲಿಸಿ ಕಾನೂನು ರೀತ್ಯ ಕ್ರಮ ಜರುಗಿಸುವಂತೆ ಸೂಚಿಸಿರುತ್ತೇನೆ. ಅದರಂತೆ ಪಿ.ಎಸ್.ಐ ರವರು ಕ್ರಮ ಜರುಗಿಸಿರುತ್ತಾರೆ. ದಿನಾಂಕ.23.01.2020 ರಂದು ಅರ್ಜಿದಾರರನ್ನು ರಾಜ್ಯ ಮಹಿಳಾ ನಿಲಯದಲ್ಲಿ ಇರಿಸಿರುವ ವಿಚಾರ ನನ್ನ ಗಮನಕ್ಕೆ ಬಂದಿರುವುದಿಲ್ಲ. ಅರ್ಜಿದಾರರನ್ನು ಮತ್ತು ಅವರ ಗಂಡ ನಾರಾಯಣಸ್ವಾಮಿ ರವರನ್ನು ದಿನಾಂಕ.24.01.2020 ರಂದು ದಸ್ತಗಿರಿ ಮಾಡಿ ದಿನಾಂಕ.25.01.2020 ರಂದು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿ ತನಿಖೆ ಕೈಗೊಂಡಿರುತ್ತಾರೆ. ದೂರುದಾರರು ಹಾಜರುಪಡಿಸಿದ್ದ ಆಡಿಯೋಕ್ಲಿಪ್‌ನ್ನು ಆಲಿಸಿದ್ದು, ದಿನಾಂಕ.23.01.2020 ರಂದು ರಾತ್ರಿ

09–00 ಗಂಟೆ ಸಮಯದಲ್ಲಿ ತಾನು ಠಾಣಾ ಪ್ರಕರಣದಲ್ಲಿ ತನಿಖೆಗಾಗಿ ಹೊರಗೆ ಹೋಗಿದ್ದೆನು. ಅರ್ಜಿದಾರರು ಆರೋಪಿಸಿರುವಂತೆ ಪೊಲೀಸ್ ಹೆಡ್‌ಕಾನ್ಸ್‌ಟೇಬಲ್ ಆನಂದ್ ರವರು ಶ್ರೀಮತಿ ಅರ್ಚನ ಮತ್ತು ಆಕೆಯ ಗಂಡ ನಾರಾಯಣಸ್ವಾಮಿ ರವರುಗಳನ್ನು ನನ್ನ ಮುಂದೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ. ಅರ್ಜಿದಾರರು ನನ್ನ ಹಾಗೂ ನಮ್ಮ ಠಾಣೆಯ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಮಾಡಿರುವ ಎಲ್ಲಾ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತವೆ ಎಂದು ಹೇಳಿಕೆಯನ್ನು ನೀಡಿರುತ್ತಾರೆ.

ಅರ್ಜಿದಾರರು ಅವರ ಹೇಳಿಕೆಯಲ್ಲಿ ಕೋಣನಕುಂಟೆ ಪೊಲೀಸ್ ಠಾಣೆಯ ಹಾಲಿ ಇನ್ಸ್‌ಪೆಕ್ಟರ್ ಶ್ರೀ ನಂಜೇಗೌಡ.ಎಸ್ ರವರು "ನನ್ನನ್ನು ಠಾಣೆಗೆ ಕರೆಯಿಸಿ ಬೆದರಿಕೆ ಹಾಕಿರುತ್ತಾರೆ" ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ನಂಜೇಗೌಡ ರವರನ್ನು ವಿಚಾರಣೆ ಮಾಡಲಾಗಿ ಅವರ ಹೇಳಿಕೆಯಲ್ಲಿ ದಿನಾಂಕ.26.12.2020ರಂದು ನಾನು ಮಾನ್ಯ ಪೊಲೀಸ್ ಆಯುಕ್ತರ ಸುತ್ತೋಲೆಯನ್ವಯ ಜನಸಂಪರ್ಕ ಸಭೆಯನ್ನು ಠಾಣಾ ಆವರಣದಲ್ಲಿ ಆಯೋಜಿಸಿದ್ದು, ಸದರಿ ಸಭೆಯಲ್ಲಿ ಹಾಜರಿದ್ದ ಶ್ರೀ ರಾಮಕೃಷ್ಣ ಎಂಬುವರು ಶ್ರೀಮತಿ ಅರ್ಚನ ಹಾಗೂ ಅವರ ಪತಿ ನಾರಾಯಣಸ್ವಾಮಿ ರವರ ವಿರುದ್ಧ ನೀಡಿದ್ದ ದೂರಿನ ವಿಚಾರಣೆಗಾಗಿ ಶ್ರೀಮತಿ ಅರ್ಚನ ಹಾಗೂ ಅವರ ಪತಿಗೆ ಹಾಜರಾಗುವಂತೆ ಸೂಚಿಸಿದ್ದು, ದಿನಾಂಕ.11.01.2021 ರಂದು ಶ್ರೀಮತಿ ಅರ್ಚನ ರವರು ಒಬ್ಬರೇ ಠಾಣೆಗೆ ಹಾಜರಾಗಿದ್ದು, ಅವರನ್ನು ದೂರುದಾರರಾದ ಶ್ರೀ ರಾಮಕೃಷ್ಣ ರವರ ಸಮಕ್ಷಮ ವಿಚಾರಣೆ ಮಾಡಲಾಗಿ ತಮ್ಮ ಮತ್ತು ರಾಮಕೃಷ್ಣರವರ ನಡುವೆ ನಡೆದಿರುವ ವ್ಯವಹಾರವನ್ನು ಒಪ್ಪಿಕೊಂಡು ವಕೀಲರ ಮೂಲಕ ಮುಂದಿನ ದಿನಾಂಕದಂದು ಬಗೆಹರಿಸಿಕೊಳ್ಳುವುದಾಗಿ ಮೌಖಿಕವಾಗಿ ತಿಳಿಸಿ ಹೋಗಿದ್ದು, ಈವರೆವಿಗೂ ಠಾಣೆಗೆ ಬಂದಿರುವುದಿಲ್ಲ. ಸದರಿ ದಿನದಂದು ಶ್ರೀಮತಿ ಅರ್ಚನ ರವರು ಠಾಣೆಗೆ ಹಾಜರಾಗಿರುವ ಬಗ್ಗೆ ಆರೋಪಿ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿರುತ್ತಾರೆ. ದೂರಿನಲ್ಲಿ ತಿಳಿಸಿರುವಂತೆ ನಾನು ಅವರಿಗೆ ಯಾವುದೇ ಬೆದರಿಕೆ ಹಾಕಿರುವುದಿಲ್ಲ. ಅವರು ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತವೆ ಎಂದು ನುಡಿದಿರುತ್ತಾರೆ.

ದೂರುದಾರರ ದೂರಿನಲ್ಲಿ ಪೊಲೀಸ್ ಹೆಡ್‌ಕಾನ್ಸ್‌ಟೇಬಲ್ ಶ್ರೀ ಆನಂದ್ ರವರು ಚೀಟಿ ಹಾಗೂ ಬಡ್ಡಿ ವ್ಯವಹಾರವನ್ನು ಮಾಡುತ್ತಿರುತ್ತಾರೆಂಬ ಆರೋಪಕ್ಕೆ ಸಂಬಂಧಿಸಿದಂತೆ ದೂರಿನಲ್ಲಿ ನಮೂದಿಸಿರುವ ವ್ಯಕ್ತಿಗಳಿಗೆ ದೂರವಾಣಿ ಕರೆ ಮಾಡಿ ವಿಚಾರಿಸಲಾಗಿ ಶ್ರೀ ಸುಧಾಕರ್ ಎಂಬುವರು ಕರೆಯನ್ನು ಸ್ವೀಕರಿಸುತ್ತಿಲ್ಲ. ಶ್ರೀ ಮಂಗಮ್ಮ @ ಹಾಲಮ್ಮ ರವರು ದೂರಿನಲ್ಲಿ ನಮೂದಿಸಿರುವ ಫೋನ್ ನಂಬರ್‌ನ್ನು ಹಾಲಿ ಬಳಸುತ್ತಿಲ್ಲ. ಶ್ರೀ ಕಬ್ಬಾಳಯ್ಯ ಎಂಬುವರು ತಾನು ಶ್ರೀ ಆನಂದ್ ರವರ ಬಳಿ ಯಾವುದೇ ಚೀಟಿ ವ್ಯವಹಾರವಾಗಲೀ ಬಡ್ಡಿ ವ್ಯವಹಾರವಾಗಲೀ ಮಾಡಿರುವುದಿಲ್ಲ. ಆದರೆ ಶ್ರೀಮತಿ ಅರ್ಚನ ರವರ ಬಳಿ

ಚೀಟಿ ಹಾಕಿರುತ್ತಾರೆಂದು ತಿಳಿಸಿ ವಿಚಾರಣೆಗೆ ಹಾಜರಾಗಿ ಹೇಳಿಕೆ ನೀಡಲು ನಿರಾಕರಿಸಿರುತ್ತಾರೆ. ಪಾಸ್ಟರ್ ಶ್ರೀ ಸ್ಯಾಮ್ಯುವಲ್ ಎಂಬುವರು ತಾನು ಪೊಲೀಸ್ ಹೆಡ್‌ಕಾನ್ಸ್‌ಟೇಬಲ್ ಶ್ರೀ ಆನಂದ್ ರವರ ಹೆಂಡತಿ ಶ್ರೀಮತಿ ಜ್ಯೋತಿರವರ ಬಳಿ 1,00,000/- ರೂಗಳನ್ನು ಬಡ್ಡಿಗೆ ಸಾಲವಾಗಿ ಹಣವನ್ನು ಪಡೆದುಕೊಂಡು ಬಡ್ಡಿ ಸಮೇತ ವಾಪಾಸ್ ನೀಡಿರುತ್ತೇನೆಂದು ತಿಳಿಸಿ ವಿಚಾರಣೆಗೆ ಹಾಜರಾಗಲು ನಿರಾಕರಿಸಿರುತ್ತಾರೆ. ಶ್ರೀಮತಿ ಸುಮಲತಾ ಎಂಬುವರು ತಾನು ಶ್ರೀ ಆನಂದ್ ರವರ ಬಳಿ ಚೀಟಿ ಹಾಕಿರುವುದಾಗಿ ತಿಳಿಸಿದ್ದು, ವಿಚಾರಣೆಗೆ ಹಾಜರಾಗಲು ನಿರಾಕರಿಸಿರುತ್ತಾರೆ.

ಕೋಣನಕುಂಟೆ ಪೊಲೀಸ್ ಠಾಣೆಯ ದಾಖಲಾತಿಗಳನ್ನು ಪರಿಶೀಲಿಸಲಾಗಿ ದಿನಾಂಕ. 23.01.2020 ರಂದು ಸಂಜೆ 05-00 ಗಂಟೆಗೆ ಶ್ರೀಮತಿ ಜಾಹ್ನವಿ @ ಸ್ವಪ್ನ ಎಂಬುವರು ಅರ್ಜಿದಾರರು ಮತ್ತು ಅವರ ಪತಿ ನಾರಾಯಣಸ್ವಾಮಿ ರವರ ವಿರುದ್ಧ ನೀಡಿರುವ ದೂರಿನ ಮೇರೆಗೆ ಠಾಣಾ ಮೊ.ಸಂ.27/2020 ಕಲಂ 406, 420 ಐಪಿಸಿ ಮತ್ತು ಕಲಂ 76 ಚಿಟ್ ಫಂಡ್ ಆಕ್ಟ್ ರೀತ್ಯ ಪ್ರಕರಣ ದಾಖಲು ಮಾಡಿರುವುದು, ನಂತರ ಅದೇ ದಿನ 21-25 ಗಂಟೆಗೆ ಅರ್ಜಿದಾರರನ್ನು ರಾಜ್ಯ ಮಹಿಳಾ ನಿಲಯದಲ್ಲಿರಿಸಲು ಮಹಿಳಾ ಸಿಬ್ಬಂದಿಗಳ ಬೆಂಗಾವಲಿನಲ್ಲಿ ಕಳುಹಿಸಿರುವುದು, ದಿನಾಂಕ: 24.01.2020ರಂದು ಬೆಳಿಗ್ಗೆ 11-45 ಗಂಟೆಗೆ ಅರ್ಜಿದಾರರನ್ನು ಹಾಗೂ ಮಧ್ಯಾಹ್ನ 01-15 ಗಂಟೆಗೆ ಅರ್ಜಿದಾರರ ಪತಿ ನಾರಾಯಣಸ್ವಾಮಿ ರವರ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿರುವ ಬಗ್ಗೆ ಹಾಗೂ ಅದೇ ದಿನ ರಾತ್ರಿ 08-40 ಗಂಟೆಗೆ ಅರ್ಜಿದಾರರನ್ನು ಮಹಿಳಾ ಸಿಬ್ಬಂದಿಗಳ ಬೆಂಗಾವಲಿನಲ್ಲಿ ರಾಜ್ಯ ಮಹಿಳಾ ನಿಲಯದಲ್ಲಿರಿಸಲು ಕಳುಹಿಸಿಕೊಟ್ಟಿರುವ ಬಗ್ಗೆ, ನಂತರ ದಿನಾಂಕ.25.01.2020ರಂದು ಅರ್ಜಿದಾರರನ್ನು ರಾಜ್ಯ ಮಹಿಳಾ ನಿಲಯದಿಂದ ಕರೆದುಕೊಂಡು ಬಂದು ನಂತರ ಬೆಳಿಗ್ಗೆ 10-30 ಗಂಟೆಗೆ ಅರ್ಜಿದಾರರನ್ನು ಮತ್ತು ಅವರ ಪತಿ ನಾರಾಯಣಸ್ವಾಮಿರವರನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದು, ಸದರಿಯವರು ಮಾನ್ಯ ನ್ಯಾಯಾಧೀಶರ ಮುಂದೆ ತಮ್ಮನ್ನು ಪೊಲೀಸರು ದಿನಾಂಕ.23.01.2020 ರಂದು ವಶಕ್ಕೆ ಪಡೆದುಕೊಂಡಿದ್ದಾಗಿ ತಿಳಿಸಿರುವುದು ಮಾನ್ಯ ನ್ಯಾಯಾಧೀಶರ ಆದೇಶ ಪ್ರತಿಯಲ್ಲಿ ನಮೂದಿಸಿರುವುದು ದಾಖಲಾತಿಗಳಿಂದ ಕಂಡು ಬಂದಿರುತ್ತದೆ.

ರಾಜ್ಯ ಮಹಿಳಾ ನಿಲಯದ ದಾಖಲಾತಿಗಳು, ಮಾನ್ಯ ನ್ಯಾಯಾಧೀಶರ ಆದೇಶದ ಪ್ರತಿ ಹಾಗೂ ಕೋಣನಕುಂಟೆ ಪೊಲೀಸ್ ಠಾಣೆಯ ದಾಖಲಾತಿಗಳ ಪರಿಶೀಲನೆಯಿಂದ ಕಂಡು ಬಂದ ಅಂಶವೇನೆಂದರೆ ತನಿಖಾಧಿಕಾರಿಯಾದ ಶ್ರೀ ವೆಂಕಟೇಶಯ್ಯ, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ರವರು ದೂರುದಾರರಾದ ಶ್ರೀಮತಿ ಅರ್ಚನ ರವರನ್ನು ದಿನಾಂಕ.23.01.2020 ರಂದು ಸಂಜೆ 05-00 ಗಂಟೆಗೆ ವಶಕ್ಕೆ

ಪಡೆದುಕೊಂಡಿದ್ದು, ನಂತರ ಆ ದಿನ ರಾತ್ರಿ ರಾಜ್ಯ ಮಹಿಳಾ ನಿಲಯದಲ್ಲಿ ಇರಿಸಿರುವುದು, ದಿನಾಂಕ.24.01.2020 ರಂದು ಬೆಳಿಗ್ಗೆ 11-45 ಗಂಟೆಗೆ ಅವರುಗಳನ್ನು ದಸ್ತಗಿರಿ ಮಾಡಿ ಆ ದಿನ ರಾತ್ರಿ ಅರ್ಜಿದಾರರನ್ನು ಮಹಿಳಾ ನಿಲಯದಲ್ಲಿರಿಸಿದ್ದು, ನಂತರ ದಿನಾಂಕ.25.01.2020 ರಂದು ಬೆಳಿಗ್ಗೆ 10-30 ಗಂಟೆಗೆ ಅರ್ಜಿದಾರರನ್ನು ಮತ್ತು ಅವರ ಪತಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದು ದಾಖಲಾತಿಗಳಿಂದ ಕಂಡು ಬಂದಿರುತ್ತದೆ.

ಪಿ.ಎಸ್.ಐ ಶ್ರೀ ವೆಂಕಟೇಶಯ್ಯ ರವರು ಅರ್ಜಿದಾರರನ್ನು ದಿನಾಂಕ.23.01.2020 ರಂದು ಸಂಜೆ 5-00 ಗಂಟೆಯಿಂದ ದಿನಾಂಕ.24.01.2020ರ ಬೆಳಿಗ್ಗೆ 11-45 ಗಂಟೆಯವರೆಗೆ ಅಕ್ರಮ ಬಂಧನದಲ್ಲಿರಿಸಿರುವುದು ವಿಚಾರಣೆ ಹಾಗೂ ದಾಖಲಾತಿಗಳಿಂದ ಕಂಡು ಬಂದಿರುತ್ತದೆ.

ದೂರು, ವರದಿ, ಅಭಿಪ್ರಾಯ ಹಾಗೂ ಮರುಪರಿಶೀಲನಾ ವರದಿಯನ್ನು ಪರಿಶೀಲಿಸಲಾಗಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಅಂದಿನ ಕೋಣನಕುಂಟೆ ಪೊಲೀಸ್ ಠಾಣೆಯ ಪಿ.ಎಸ್.ಐ ಶ್ರೀ ವೆಂಕಟೇಶಯ್ಯ ರವರು ಅರ್ಜಿದಾರರನ್ನು ದಿನಾಂಕ.23.01.2020ರಂದು ಸಂಜೆ 05-00 ಗಂಟೆಯಿಂದ ದಿನಾಂಕ.24.01.2020ರ ಬೆಳಿಗ್ಗೆ 11-45 ಗಂಟೆಯವರೆಗೆ ಅಕ್ರಮ ಬಂಧನದಲ್ಲಿಟ್ಟು ಕರ್ತವ್ಯ ಲೋಪವೆಸಗಿರುವುದು ಹಾಗೂ ದೂರುದಾರರಾದ ಶ್ರೀಮತಿ ಅರ್ಚನ ರವರ ಅಕ್ರಮ ಬಂಧನದ ಬಗ್ಗೆ ಅಂದಿನ ಕೋಣನಕುಂಟೆ ಪೊಲೀಸ್ ಠಾಣೆಯ ಠಾಣಾಧಿಕಾರಿಯಾದ ಶ್ರೀ ಧರ್ಮೇಂದ್ರ ಟಿ.ಎಂ ರವರು ಯಾವುದೇ ರೀತಿ ಕ್ರಮ ತೆಗೆದುಕೊಳ್ಳದೇ ಕರ್ತವ್ಯ ನಿರ್ಲಕ್ಷತನ ತೋರಿರುವುದು ಹಾಗೂ ಸುದ್ದಗುಂಟೆಪಾಳ್ಯ ಪೊಲೀಸ್ ಠಾಣೆಯ ಸಿ.ಹೆಚ್.ಸಿ-6213 ಶ್ರೀ ಆನಂದ್ ಎಂ ರವರು ಅಧಿಕಾರ ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಇವರುಗಳ ಮೇಲೆ ಶಿಸ್ತು ಕ್ರಮ ಜರುಗಿಸಲು ಶಿಫಾರಸ್ಸು ಮಾಡಬಾರದೇಕೆ ಎಂಬುದರ ಬಗ್ಗೆ ತಾವು ಹೇಳುವುದೇನಾದರೂ ಇದ್ದಲ್ಲಿ ಆಯೋಗದ ಮುಂದೆ ಖುದ್ದ ಹಾಜರಾಗಿ ನಿಮ್ಮ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಲು ಕಲಂ 16ರ ಮಾನವ ಹಕ್ಕುಗಳ ರಕ್ಷಣಾ ಕಾಯ್ದೆ 1993ರ ಅಡಿಯಲ್ಲಿ ಅಂದಿನ ಕೋಣನಕುಂಟೆ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಧರ್ಮೇಂದ್ರ ಟಿ.ಎಂ ಹಾಲಿ ಪೊಲೀಸ್ ಇನ್ಸ್‌ಪೆಕ್ಟರ್, ಅತಿಗಣ್ಯ ವ್ಯಕ್ತಿಗಳ ಭದ್ರತಾ ವಿಭಾಗ, ಬೆಂಗಳೂರು ನಗರ; ಅಂದಿನ ಕೋಣನಕುಂಟೆ ಪೊಲೀಸ್ ಠಾಣೆಯ ಪಿ.ಎಸ್.ಐ ಶ್ರೀ ವೆಂಕಟೇಶಯ್ಯ (ಹಾಲಿ ನಿವೃತ್ತ) ಹಾಗೂ ಶ್ರೀ ಆನಂದ್ ಎಂ ಸಿಹೆಚ್‌ಸಿ-6213, ಸುದ್ದಗುಂಟೆ ಪೊಲೀಸ್ ಠಾಣೆ ರವರುಗಳಿಗೆ ನೋಟಿಸ್ ಜಾರಿ ಮಾಡಲಾಗಿದ್ದು, ಹಾಗೂ ಶ್ರೀಮತಿ ಅರ್ಚನ ಹಾಗೂ ಅವರೊಂದಿಗೆ ಅವರ ಪತಿಯಾದ ಶ್ರೀ ನಾರಾಯಣಸ್ವಾಮಿ ರವರಿಗೂ ಆಯೋಗದ ಮುಂದೆ ಹಾಜರಾಗಿ ಹೇಳಿಕೆಗಳನ್ನು ನೀಡುವಂತೆ

ಸೂಚಿಸಲಾಗಿದ್ದು, ಅದರಂತೆ ದಿನಾಂಕ.27.09.2021 ರಂದು ದೂರುದಾರರಾದ ಶ್ರೀಮತಿ ಅರ್ಚನ ಹಾಗೂ ಶ್ರೀ ಧರ್ಮೇಂದ್ರ ಪೊಲೀಸ್ ಇನ್ಸ್‌ಪೆಕ್ಟರ್ ರವರುಗಳು ಆಯೋಗದ ಮುಂದೆ ಹಾಜರಾಗಿದ್ದು, ಶ್ರೀಮತಿ ಅರ್ಚನ ರವರು ಕೆಳಕಂಡಂತೆ ಹೇಳಿಕೆಯನ್ನು ನೀಡಿರುತ್ತಾರೆ:-

"ನಾವು ಈ ಹಿಂದೆ 04.09.2011 ರಿಂದ 2019 ಡಿಸೆಂಬರ್ ರವರೆಗೂ ಮನೆ ನಂ.86/6, ಈಶ್ವರ ಟೆಂಪಲ್ ರಸ್ತೆ, ಕನಕಪುರ ರಸ್ತೆ, ಬೆಂಗಳೂರು ನಗರ ಇಲ್ಲಿ ವಾಸವಾಗಿರುವ ಶ್ರೀ ಆನಂದ್ ಹೆಚ್‌ಸಿ-6213 ರವರ 1ನೇ ಮಹಡಿಯಲ್ಲಿರುವ ಮನೆಯಲ್ಲಿ 6000/- ರೂಗಳಿಗೆ ಬಾಡಿಗೆಗೆ ತೆಗೆದುಕೊಂಡು ವಾಸವಿದ್ದೆವು. 2011 ರಿಂದ 2015 ರವರೆಗೆ ನಮ್ಮ ಮತ್ತು ಶ್ರೀ ಆನಂದ್ ರವರ ಮಧ್ಯೆ ಯಾವುದೇ ಹಣಕಾಸಿನ ವ್ಯವಹಾರ ಇರಲಿಲ್ಲ. 2015 ರಲ್ಲಿ ಶ್ರೀ ಆನಂದ್ ರವರ ಹೆಂಡತಿ ಶ್ರೀಮತಿ ಜ್ಯೋತಿ ರವರು ನಮ್ಮ ಮನೆಗೆ ಬಂದು ನಾವು ಹೊಸದಾಗಿ ಚೀಟಿ ಶುರು ಮಾಡುತ್ತಿದ್ದೇವೆ ಹಾಗೂ ಸಾಲಕ್ಕೆ ಹಣ ಬೇಕಾದಲ್ಲಿ 5% ಬಡ್ಡಿ ದರದಲ್ಲಿ ಸಾಲವನ್ನು ನೀಡುತ್ತೇವೆ, ನಿಮಗೆ ಪರಿಚಯ ಇರುವ ಜನರನ್ನು ಸೇರಿಸಿ ಎಂದು ಕೇಳಿಕೊಂಡರು. ಆಗ ನಾನು 5 ಜನರನ್ನು ಚೀಟಿಗೆ ಸೇರಿಸಿದೆ. (ನಾನು ಇದಕ್ಕಿಂತ ಮುಂಚೆ ಮಾನವ ಹಕ್ಕುಗಳ ಆಯೋಗದ ಡಿವೈ ಎಸ್‌ಪಿ ರವರ ಮುಂದೆ ಹೇಳಿಕೆ ಕೊಡುವಾಗ ಮೇಲೆ ಹೇಳಿದ ಶ್ರೀ ಆನಂದ್ ರವರ ಹತ್ತಿರ ಚೀಟಿ ಹಾಕಿದ 4 ಜನರ ಹೆಸರನ್ನು ಮಾತ್ರ ಕೊಟ್ಟಿದ್ದೆ. ಈಗ ಅದರ ಜೊತೆಗೆ ಚೀಟಿ ಹಾಕಿರುವ ಇನ್ನೊಬ್ಬ ಮಹಿಳೆ ಸುಮಲತ ರವರ ಹೆಸರನ್ನು ಸೇರಿಸಲು ತಿಳಿಸಿದ್ದೇನೆ).

ನಾನು ಒಂದು ಟೈಲರಿಂಗ್ ಅಂಗಡಿ ಇಟ್ಟುಕೊಂಡಿದ್ದೆ. ಆದರೆ ನನಗೆ ಕಿಡ್ನಿ ಪ್ರಾಬ್ಲಮ್ ಇದ್ದದ್ದರಿಂದ ನಾನು ಅಂಗಡಿಯನ್ನು ಮುಚ್ಚಿದೆ. 2019ನೇ ಇಸವಿಯಲ್ಲಿ ನನ್ನ ನಾದಿನಿ ಮದುವೆ ಇತ್ತು ಹಾಗಾಗಿ ನಾವು ಶ್ರೀ ಆನಂದ್ ರವರ ಹತ್ತಿರ ಸ್ವಲ್ಪ ಹಣ ಕೇಳಿದೆವು. ಹೀಗೆ ಅವರತ್ತಿರ ಬಡ್ಡಿಗೆಂದು ತೆಗೆದುಕೊಂಡು ಹಣ ಸುಮಾರು 3 ಲಕ್ಷ ರೂಗಳವರೆಗೂ ಆಗಿತ್ತು, ಇದಕ್ಕೆ ಬಡ್ಡಿಯನ್ನು ಕಟ್ಟುತ್ತಿದೆವು. ಆದರೆ 2019ರಿಂದ ಬಡ್ಡಿಯನ್ನು ಕೊಡಲು ಸಾಧ್ಯವಾಗಲಿಲ್ಲ. ಈ ವಿಚಾರವಾಗಿ ಶ್ರೀ ಆನಂದ್ ರವರು ನನ್ನ ಮೇಲೆ ತುಂಬಾ ಜೋರ್ ಮಾಡಲು ಶುರು(ಬೈಯ್ಯಲು) ಮಾಡಿದರು. ಅದಕ್ಕೆ ನಾನು ಅವಮಾನದಿಂದ ಯಾರಿಗೂ ಹೇಳದೆ ಮನೆ ಬಿಟ್ಟು ನನ್ನ ಅಪ್ಪನ ಅಕ್ಕನ ಮನೆಗೆ ಹೋದೆ.

ನಂತರ ದಿನಾಂಕ.30.12.2019 ರಂದು ನನ್ನ ಗಂಡ ಶ್ರೀ ನಾರಾಯಣಸ್ವಾಮಿ ರವರು ನನಗೆ ಫೋನ್ ಮಾಡಿದಾಗ ನಾನು ಇರುವ ಜಾಗ ತಿಳಿಸಿದೆ.(ನನ್ನ ಗಂಡ ಶ್ರೀ ನಾರಾಯಣಸ್ವಾಮಿ ರವರಿಗೆ ಮಹಿಳಾ ಆಯೋಗ ದಿಂದ ದೂರವಾಣಿ ಕರೆ ಬಂದ ಮೇರೆಗೆ, ನನ್ನ ಗಂಡನಿಗೆ ನಾನು ಎಲ್ಲಿ ಇದ್ದೀನಿ ಎಂಬ ಬಗ್ಗೆ ತಿಳಿಯಿತು.) ನಂತರ ದಿನಾಂಕ.18.01.2020ರಂದು ನಾನು ಅಡ್ವೋಕೇಟ್ ಶ್ರೀ ಸುದರ್ಶನ್ ರವರ ಮೂಲಕ ಶ್ರೀ ಆನಂದ್ ರವರಿಗೆ ನೋಟೀಸ್ ಕಳುಹಿಸಿದೆ. ಇದಕ್ಕೆ ಶ್ರೀ ಆನಂದ್ ರವರು ನಮ್ಮ ಲಾಯರ್ ರವರ ಹತ್ತಿರ ಮಾತನಾಡಿ, ಶ್ರೀಮತಿ ಅರ್ಚನ ರವರು ಸುಮಾರು 100

ಜನರ ಕಡೆಯಿಂದ ಹಣ ಹಾಗೂ ಇತ್ಯಾದಿಗಳನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ತಿಳಿಸಿರುತ್ತಾರೆ. ಆಗ ನಮ್ಮ ಲಾಯರ್ ರವರು ಶ್ರೀ ಆನಂದ್ ರವರಿಗೆ ಬಂದು ಮಾತನಾಡಲು ಹೇಳಿದರು. ನಂತರ ಶ್ರೀ ಆನಂದ್ ರವರು ನನ್ನ ಗಂಡ ಶ್ರೀ ನಾರಾಯಣಸ್ವಾಮಿ ರವರಿಗೆ ನಾನು ಇರುವ ಜಾಗವನ್ನು ಕೇಳಿಕೊಂಡಿದ್ದರು, ಆದರೆ ಅವರು ಬರಲಿಲ್ಲ.

ದಿನಾಂಕ.23.01.2020 ಸಂಜೆ 6.30 ಗಂಟೆಗೆ ರಂದು ನಾನು ಶಂಕರ್ ಶಾಪ್ ಅಂತ ಒಂದು ಬೇಕರಿಗೆ ಹಾಲು ತರಲು ಹೋದಾಗ ಏಕಾಏಕಿ ಏನೂ ತಿಳಿಸದೇ ಒಬ್ಬ ಪುರುಷ ಪೊಲೀಸ್ ಸಿಬ್ಬಂದಿ ಶ್ರೀ ಶಶಿಕುಮಾರ್ ಹಾಗೂ ಒಂದು ಮಹಿಳಾ ಪೊಲೀಸ್ ಸಿಬ್ಬಂದಿ ಬಂದು ನನ್ನ ಹಾಗೂ ನನ್ನ ಗಂಡನನ್ನು ಕೋಣನಕುಂಟೆ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಠಾಣೆಯಲ್ಲಿ ಇರಿಸಿದರು. ನಂತರ ಸಂಜೆ ಪಿ.ಐ ಶ್ರೀ ಧರ್ಮೇಂದ್ರ ಸರ್ ರವರ ಮುಂದೆ ನನಗೆ ಹಾಜರುಪಡಿಸಿದರು. ಆಗ ಶ್ರೀ ಧರ್ಮೆಂದ್ರ ಸರ್ ರವರ ಮುಂದೆ ನಾನು ಶ್ರೀ ಆನಂದ್ ರವರ ಕಡೆಯಿಂದ ಬಡ್ಡಿಗಾಗಿ ಸಾಲ ಪಡೆದಿರುವ ಬಗ್ಗೆ ಹೇಳಿ, ಈಗ ನಮಗೆ ಬಡ್ಡಿ ಕಟ್ಟಲು ಸಾಧ್ಯವಾಗುತ್ತಿಲ್ಲವೆಂದು ಹೇಳಿದೆವು. ಅದಕ್ಕೆ ಶ್ರೀ ಧರ್ಮೇಂದ್ರ ರವರು ಪಿ.ಎಸ್.ಐ ಶ್ರೀ ವೆಂಕಟೇಶಯ್ಯ ನವರಿಗೆ ಈ ವಿಚಾರವಾಗಿ ಏನು ಕಾನೂನು ರೀತ್ಯ ಕ್ರಮ ಕೈಗೊಳ್ಳಬೇಕೋ ಅದರಂತೆ ಕ್ರಮ ಕೈಗೊಳ್ಳುವಂತೆ ಅವರಿಗೆ ತಿಳಿಸಿ, ಠಾಣೆಯಿಂದ ಹೊರಗೆ ಹೋದರು. ಅದಾದ ನಂತರ ಪಿ.ಎಸ್.ಐ ಶ್ರೀ ವೆಂಕಟೇಶಯ್ಯ ನವರು ನನ್ನನ್ನು ಸ್ಟೇಟ್ ಹೋಂಗೆ ಕಳುಹಿಸಿ ಕೊಟ್ಟರು. ನಂತರ ದಿನಾಂಕ.24.01.2020ರಂದು ಸ್ಟೇಟ್ ಹೊಂ ನಿಂದ ಪುನ: ಕೋಣನಕುಂಟೆ ಠಾಣೆಗೆ ಬೆಳಿಗ್ಗೆ 6.30 ಗಂಟೆಗೆ ಕರೆದುಕೊಂಡು ಬಂದರು. ಆಗ ನಾನು ಪಿರೀಯಡ್ಸ್ ಆಗಿದ್ದೆ. ಅದರ ಸಲುವಾಗಿ ಪ್ಯಾಡ್ಸ್ ತೆಗೆದು ಕೊಳ್ಳಲು ನಾನು ಅಲ್ಲೆ ಟೇಬಲ್ ಕೆಳಗೆ ಕುಳಿಸಿದ್ದ ನನ್ನ ಗಂಡನನ್ನು ಹಣ ಕೊಡುವಂತೆ ಕೇಳಿದೆ. ಅದಕ್ಕೆ ನನ್ನ ಗಂಡ ನನ್ನ ಪರ್ಸ್ ಅನ್ನು ಪೊಲೀಸ್ ವೆಂಕಟೇಶಯ್ಯ ನವರು ಕಿತ್ತುಕೊಂಡಿದ್ದಾರೆ ಎಂದು ಹೇಳಿದರು. ಆಗ ನಾನು ಶ್ರೀ ವೆಂಕಟೇಶಯ್ಯನವರನ್ನೇ ನಾನು ಪ್ಯಾಡ್ಸ್ ತಗೋಬೇಕು ಹಣ ಕೊಡಿ ಸರ್, ನನಗೆ ನಿಲ್ಲಲು ಸಾಧ್ಯವಾಗುತ್ತಿಲ್ಲವೆಂದು ಬೇಡಿಕೊಂಡರೂ ಸಹ ಅವರು ನನ್ನ ಗಂಡನ ಪರ್ಸ್ ಕೊಡಲಿಲ್ಲ. ಆಗ ಅಲ್ಲೆ ಇದ್ದ ಒಬ್ಬ ಮಹಿಳಾ ಸಿಬ್ಬಂದಿ ನನಗೆ ಪ್ಯಾಡ್ಸ್ ತೆಗೆದುಕೊಳ್ಳಲು ಹಣ ಕೊಟ್ಟರು ಆಗ ಪುನ: ಸಂಜೆ 8 ಗಂಟೆಗೆ ಸ್ಟೇಟ್ ಹೋಂ ಗೆ ಕರೆದುಕೊಂಡು ಹೋಗುವ ದಾರಿಯಲ್ಲೆ ನಾನು ಮೆಡಿಕಲ್ ಶಾಪ್‌ನಲ್ಲಿ ಪ್ಯಾಡ್ಸ್ ತೆಗೆದುಕೊಂಡು ಈ ವಿಚಾರ ನನಗೆ ತುಂಬಾ ಬೇಸರ ತಂದಿದೆ. ನನ್ನ ಗಂಡನನ್ನು 3 ದಿನಗಳಿಂದ ಕೋಣನಕುಂಟೆ ಪೊಲೀಸ್ ಠಾಣೆಯಲ್ಲೆ ಇರಿಸಿಕೊಂಡಿದ್ದರು.

ನಂತರ ದಿನಾಂಕ. 25.01.2020 ರಂದು ಬೆಳಿಗ್ಗೆ ಪುನ: ಸ್ಟೇಟ್ ಹೊಂ ನಿಂದ ಕೋಣನಕುಂಟೆ ಪೊಲೀಸ್ ಠಾಣೆಗೆ ವಾಪಸ್ ಕರೆ ತಂದರು. ನಂತರ ಪೊಲೀಸರು ನನಗೆ ಹಾಗೂ ನನ್ನ ಗಂಡನನ್ನು ನಾವು ವಾಸವಿದ್ದ ಮನೆಗೆ ಕರೆದುಕೊಂಡು ಹೋಗಿ ಮನೆಯಲ್ಲಿ ಚೀಟಿ ವ್ಯವಹಾರಕ್ಕೆ ಸಂಬಂಧಪಟ್ಟ ದಾಖಲಾತಿಗಳ ಬಗ್ಗೆ ಹುಡುಕಾಟ

ನಡೆಸಿ, ನಂತರ ಮದ್ಯಾಹ್ನ 1.00 ಗಂಟೆಗೆ ಠಾಣೆಯ ಪಕ್ಕದಲ್ಲಿದ್ದ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ನಡೆಸಿ, ಠಾಣೆಗೆ ಕರೆತಂದು ಠಾಣಾ ಮೊ.ಸಂಖ್ಯೆ.27/2020 ಕಲಂ 406, 420 ಐಪಿಸಿ ಮತ್ತು ಕಲಂ 76 ಚಿಟ್ ಫಂಡ್ ಆಕ್ಟ್ ಮೊಕದ್ದಮೆಯಲ್ಲಿ ಮದ್ಯಾಹ್ನ 1.45 ಗಂಟೆಗೆ ನಮ್ಮನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಸ್ವಾಮಿ ನನಗೆ ಇದರಿಂದ ತುಂಬಾ ಅವಮಾನವಾಗಿದೆ. ದಯವಿಟ್ಟು, ನನ್ನ ಮನೆಯ ಸಾಮಾನುಗಳನ್ನು ಕೊಡಿಸಿಕೊಡಿ, ಆದರೆ ಶ್ರೀ ಆನಂದ್ ರವರು ನಾವು ವಾಸವಿದ್ದ ಮನೆಯನ್ನು ಲಾಕ್ ಮಾಡಿ ಇಟ್ಟುಕೊಂಡಿದ್ದಾರೆ. ನಾವು ತುಂಬಾ ತೊಂದರೆಯಲ್ಲಿದ್ದೀವಿ, ಸಹಾಯ ಮಾಡಿ ಸ್ವಾಮಿ."

ದಿನಾಂಕ 27.09.2021 ರಂದು ಶ್ರೀ ವೆಂಕಟೇಶಯ್ಯ, ನಿವೃತ್ತ ಪಿ.ಎಸ್.ಐ ರವರು ಆಯೋಗದ ಮುಂದೆ ಹಾಜರಾಗದ ಕಾರಣ ಮತ್ತೊಂದು ಅವಕಾಶ ನೀಡಲಾಗಿ ಹಾಗೂ ಶ್ರೀ ನಂಜೇಗೌಡ, ಪೊಲೀಸ್ ಇನ್ಸ್‌ಪೆಕ್ಟರ್, ಕೋಣನಕುಂಟೆ ಪೊಲೀಸ್ ಠಾಣೆ, ಶ್ರೀ ಧರ್ಮೇಂದ್ರ ಟಿ.ಎಂ., ಅಂದಿನ ಪೊಲೀಸ್ ಇನ್ಸ್‌ಪೆಕ್ಟರ್, ಕೋಣನಕುಂಟೆ ಪೊಲೀಸ್ ಠಾಣೆ, ಶ್ರೀ ಆನಂದ್.ಎಂ., ಹೆಚ್.ಸಿ.6213, ಸುದ್ದಗುಂಟೆಪಾಳ್ಯ ಪೊಲೀಸ್ ಠಾಣೆ ಹಾಗೂ ದೂರುದಾರರನ್ನು ದಿನಾಂಕ 06.11.2021ರಂದು ವಿಚಾರಣೆಗಾಗಿ ಹಾಜರಾಗುವಂತೆ ಆದೇಶಲಾಗಿದ್ದು, ಅದರಂತೆ ದಿನಾಂಕ 06.11.2021ರಂದು ಸದರಿಯವರುಗಳು ಆಯೋಗದ ಮುಂದೆ ಹಾಜರಾಗಿದ್ದು, ಶ್ರೀ ವೆಂಕಟೇಶಯ್ಯ, ನಿವೃತ್ತ ಪಿ.ಎಸ್.ಐ, ಶ್ರೀ ನಂಜೇಗೌಡ, ಪಿ.ಐ, ದೂರುದಾರರ ಪತಿ ಶ್ರೀ ನಾರಾಯಣಸ್ವಾಮಿ ರವರುಗಳು, ಅವರುಗಳ ಹೇಳಿಕೆಗಳನ್ನು ಹಾಗೂ ಶ್ರೀಮತಿ ಅರ್ಚನ ರವರು ಅವರ ಮುಂದುವರೆದ ಹೇಳಿಕೆಯನ್ನು ನೀಡಿರುತ್ತಾರೆ. ಶ್ರೀ ಧರ್ಮೇಂದ್ರ, ಪಿ.ಐ. ಹಾಗೂ ಶ್ರೀ ಆನಂದ್, ಹೆಚ್.ಸಿ.–6213 ರವರುಗಳು ಅವರುಗಳ ಲಿಖಿತ ಸಮಜಾಷಿಗಳನ್ನು ಸಲ್ಲಿಸಿರುತ್ತಾರೆ.

ದಿನಾಂಕ 06.11.2021 ರಂದು ಅಂದಿನ ಕೋಣನಕುಂಟೆ ಪೊಲೀಸ್ ಠಾಣೆಯ ಪಿ.ಎಸ್.ಐ ಶ್ರೀ ವೆಂಕಟೇಶಯ್ಯ (ಹಾಲಿ ನಿವೃತ್ತ) ರವರು ಆಯೋಗದ ಮುಂದೆ ನೀಡಿರುವ ಹೇಳಿಕೆಯು ಕೆಳಕಂಡಂತೆ ಇದೆ:

"ನಾನು 22.04.2017 ರಿಂದ 31.05.2021 ವರೆಗೆ ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕಾರ್ಯ ನಿರ್ವಹಿಸಿದ್ದೇನೆ.

ದಿನಾಂಕ.23.01.2020 ರಂದು ನಾನು ಮೇಲ್ಕಂಡ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ, ಸಂಜೆ 5 ಗಂಟೆ ಸಮಯದಲ್ಲಿ ನಮ್ಮ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಆದ ಶ್ರೀ ಧರ್ಮೇಂದ್ರ ಸಾಹೇಬರವರ ಛೇಂಬರ್‌ಗೆ ಶ್ರೀಮತಿ ಅರ್ಚನ, ಶ್ರೀಮತಿ ಜಾಹ್ನವಿ, ಹಾಗೂ ಅವರ ಜೊತೆಯಲ್ಲಿ ಸುಮಾರು 10 ರಿಂದ 20 ಜನರು ಹೋಗಿದ್ದು, ಸ್ವಲ್ಪ ಸಮಯದ ನಂತರ ಪಿ.ಐ ಶ್ರೀ ಧರ್ಮೇಂದ್ರ ಸಾಹೇಬರು ನನ್ನನ್ನು

ಕರೆದು ಅಲ್ಲಿ ಹಾಜರಿದ್ದ ಜನಗಳನ್ನು ತೋರಿಸಿ, ಇವರುಗಳನ್ನು ವಿಚಾರಣೆ ಮಾಡಿ, ಕಾನೂನು ರೀತ್ಯ ಕ್ರಮ ಕೈಗೊಳ್ಳುವಂತೆ ಹೇಳಿದ ಮೇರೆಗೆ ನಾನು ಹಾಜರಿದ್ದಂತಹ ಶ್ರೀಮತಿ ಜಾಹ್ನವಿ, ಶ್ರೀಮತಿ ಅರ್ಚನ ಹಾಗೂ ಅವರ ಜೊತೆ ಇದ್ದ ಇನ್ನೂ 10 ರಿಂದ 20 ಜನಗಳನ್ನು ವಿಚಾರಣೆ ಮಾಡಲಾಗಿ, ಶ್ರೀಮತಿ ಅರ್ಚನರವರು ಸುಮಾರು 20 ರಿಂದ 30 ಜನರಿಗೆ ಚೀಟಿ ಹಾಗೂ ಪಟಾಕಿ ಚೀಟಿಯ ಹಣ 60 ರಿಂದ 70 ಲಕ್ಷ ರೂಗಳನ್ನು ಕೊಡಬೇಕಾಗಿ ತಿಳಿದು ಬಂತು. ಅದರಲ್ಲಿ ಶ್ರೀ ಜಾಹ್ನವಿ ಎಂಬುವರು ಸುಮಾರು 15 ಜನರ ಸಹಿ ಮಾಡಿರುವ ಒಂದು ಕಂಪ್ಲೈಂಟ್ ಟೈಪಿಂಗ್ ಕಾಪಿಯನ್ನು ತಂದಿದ್ದು, ಈ ಪ್ರಕಾರವಾಗಿ ದೂರನ್ನು ದಾಖಲಿಸಿ, ತನಿಖೆ ನಡೆಸುವಂತೆ ತಿಳಿಸಿದ ಮೇರೆಗೆ ಠಾಣಾ ಮೊ.ಸಂ.27/2020 ಕಲಂ 406, 420 ಐಪಿಸಿ ಮತ್ತು ಕಲಂ 76 ಚಿಟ್‌ಫಂಡ್ ಆಕ್ಟ್ ರೀತ್ಯ ಶ್ರೀಮತಿ ಅರ್ಚನ ಮತ್ತು ನಾರಾಯಣಸ್ವಾಮಿ ರವರುಗಳ ವಿರುದ್ಧ ಪ್ರಕರಣ ದಾಖಲು ಮಾಡಿ ಎಫ್.ಐ.ಆರ್ ಮಾಡಿರುತ್ತೇನೆ. ಆದರೆ ಅಲ್ಲೆ ಠಾಣೆಯ ಹೊರಗೆ ನೆರೆದಿದ್ದ ಜನರೆಲ್ಲರೂ ಶ್ರೀಮತಿ ಅರ್ಚನ ರವರನ್ನು ಹೊರಗಡೆ ಕಳುಹಿಸಿ ಕೊಡಿ, ಇವರಿಂದ ನಾವು ಹಣ ವಸೂಲಿ ಮಾಡಿಕೊಳ್ಳುತ್ತೇವೆಂದು ಕೂಗಾಡುತ್ತಿದ್ದರು. ಆ ಒಂದು ಕಾರಣಕ್ಕಾಗಿ ನಾನು ಶ್ರೀಮತಿ ಅರ್ಚನ ರವರ ಪ್ರಾಣಕ್ಕೆ ಅಪಾಯ ಆಗಬಹುದೆಂದು ಅರ್ಚನಾರವರನ್ನು ಸ್ಟೇಟ್ ಹೋಂ ಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಅಲ್ಲೆ ಇದ್ದ ಪಿರ್ಯಾದುದಾರರನ್ನು ಸಮಾಧಾನಪಡಿಸಿ ಮನೆಗೆ ಕಳುಹಿಸಿಕೊಟ್ಟಿರುತ್ತೇನೆ.

ಮಾರನೇ ದಿನ ದಿನಾಂಕ.24.01.2020 ರಂದು ಸ್ಟೇಟ್ ಹೋಂ ನಿಂದ ಶ್ರೀಮತಿ ಅರ್ಚನ ರವರನ್ನು ಕರೆಸಿ, ಸದರಿಯವರನ್ನು ವಿಚಾರಣೆ ನಡೆಸಿದ್ದು, ಅವರ ತಪ್ಪೊಪ್ಪಿಗೆಯಂತೆ ಅವರ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ. ಹಾಗೂ ಅದೇ ದಿನ ಮದ್ಯಾಹ್ನ 1.30 ಗಂಟೆಗೆ ಶ್ರೀ ನಾರಾಯಣಸ್ವಾಮಿ ರವರನ್ನು ಹೆಚ್.ಸಿ–8051 ಶ್ರೀ ಚಿಕ್ಕಕೆಂಪಯ್ಯ ನವರು ಠಾಣೆಗೆ ಹಾಜರುಪಡಿಸಿದ ಮೇರೆಗೆ ಅವರ ವಿರುದ್ಧವೂ ಸಹ ದಸ್ತಗಿರಿ ಕ್ರಮ ಅನುಸರಿಸಿದ್ದೇನೆ. ಹಾಗೂ ಪಿ.ಐ ರವರ ಆದೇಶದಂತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೂ ಹಲವು ಸಾಕ್ಷಿದಾರರನ್ನು ಬರಮಾಡಿಕೊಂಡು ಕೇಸಿನ ಬಗ್ಗೆ ತನಿಖೆ ನಡೆಸಿ, ಅದೇ ದಿನ ಶ್ರೀಮತಿ ಅರ್ಚನ ರವರನ್ನು ಪುನ: ಸ್ಟೇಟ್ ಹೋಂ ಗೆ ಕಳುಹಿಸಿಕೊಡಲಾಯಿತು. ಮಾರನೇ ದಿನ ಸ್ಟೇಟ್ ಹೋಂ ನಿಂದ ಶ್ರೀಮತಿ ಅರ್ಚನ ರವರನ್ನು ವಾಪಸ್ ಕರೆಸಿ, ಕೋರ್ಟ್ ಮುಂದೆ ಹಾಜರುಪಡಿಸಲಾಯಿತು.

ನಾನು ದಿನಾಂಕ.23.01.2020 ರಂದು ಶ್ರೀ ನಾರಾಯಣಸ್ವಾಮಿರವರನ್ನು ಬಂಧನದಲ್ಲಿ ತೆಗೆದುಕೊಂಡಿಲ್ಲ ಮತ್ತು ಅವರ ಪರ್ಸ್ ಮತ್ತು ಮೊಬೈಲ್ ಅನ್ನು ಸೀಜ್ ಮಾಡಿಲ್ಲ."

ದಿನಾಂಕ 06.11.2021 ರಂದು ಕೋಣನಕುಂಟೆ ಪೊಲೀಸ್ ಠಾಣೆಯ ಪಿ.ಐ ಶ್ರೀ ನಂಜೇಗೌಡ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆಯು ಕೆಳಕಂಡಂತೆ ಇದೆ:

"ನಾನು ದಿನಾಂಕ.06.12.2020 ರಿಂದ ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕಾರ್ಯ ನಿರ್ವಹಿಸಿಕೊಂಡಿರುತ್ತೇನೆ.

ದಿನಾಂಕ.26.12.2020ರಂದು ಮಾನ್ಯ ಪೊಲೀಸ್ ಆಯುಕ್ತರ ಸುತ್ತೋಲೆಯನ್ವಯ ದೂರುದಾರರ ಜನಸಂಪರ್ಕ ಸಭೆಯನ್ನು ಠಾಣಾ ಆವರಣದಲ್ಲಿ ಆಯೋಜಿಸಿದ್ದ ಸಮಯದಲ್ಲಿ ಶ್ರೀ ರಾಮಕೃಷ್ಣ ಎಂಬುವರು ಸಭೆಯಲ್ಲಿ ಹಾಜರಾಗಿ, ನನಗೆ ಅರ್ಚನ ಮತ್ತು ಅವರ ಪತಿ ಶ್ರೀ ನಾರಾಯಣಸ್ವಾಮಿ ಎಂಬುವರು ತನಗೆ ಪರಿಚಯವಿದ್ದು, ಅವರ ಬಳಿ ಚೀಟಿ ವ್ಯವಹಾರ ಮಾಡಿರುತ್ತೇನೆ. ಕೈ ಸಾಲ ಕೊಟ್ಟಿರುತ್ತೇನೆ. ಮತ್ತು ಮದುವೆ ಕಾರ್ಯಕ್ರಮದಲ್ಲಿ ಭಾಗವಹಿಸಲು ತನ್ನ ಚಿನ್ನದ ಒಡವೆಗಳನ್ನು ಕೊಟ್ಟಿರುತ್ತೇನೆ. ಸದರಿ ಅರ್ಚನ ಮತ್ತು ಅವರ ಪತಿ ನಾರಾಯಣಸ್ವಾಮಿ ರವರು ಸದರಿ ಚೀಟಿ ಹಣ, ಕೈಸಾಲದ ಹಣ ಹಾಗೂ ಚಿನ್ನದ ಒಡವೆಗಳನ್ನು ವಾಪಸ್ ನೀಡದೇ ಪರಾರಿಯಾಗಿದ್ದು, ತಾನು ನೀಡಿದ್ದ ಚಿನ್ನದ ಒಡವೆಗಳನ್ನು ಮಣಪ್ಪುರಂ ಗೋಲ್ಡ್ ಕಂಪನಿಯಲ್ಲಿ ತನಗೆ ತಿಳಿಸದೇ ಗಿರಿವಿ ಇಟ್ಟು, ಹಣವನ್ನು ಅವರ ಸ್ವಂತ ಖರ್ಚಿಗೆ ದುರುಪಯೋಗಪಡಿಸಿಕೊಂಡಿರುತ್ತಾರೆ. ಸದರಿ ಒಡವೆಗಳನ್ನು ಎರಡು ಲಕ್ಷದ ಹದಿನೈದು ಸಾವಿರ ರೂಗಳನ್ನು ಕೊಟ್ಟು ನಾನು ಬಿಡಿಸಿಕೊಂಡಿರುತ್ತೇನೆಂಬುದು ದೂರಿನ ಸಾರಾಂಶವಾಗಿದೆ. ನಾನು ಈ ಬಗ್ಗೆ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ವೆಂಕಟೇಶಯ್ಯ ನವರನ್ನು(ಹಾಲಿ ನಿವೃತ್ತಿ) ಎಂಬುವರನ್ನು ವಿಚಾರಣೆ ಮಾಡಲಾಗಿ, ಈಗಾಗಲೇ ಎದುರು ಅರ್ಜಿದಾರರರಾದ ಶ್ರೀಮತಿ ಅರ್ಚನ ಹಾಗೂ ಅವರ ಪತಿ ಶ್ರೀ ನಾರಾಯಣಸ್ವಾಮಿ ರವರ ವಿರುದ್ಧ ನಮ್ಮ ಠಾಣಾ ಮೊ.ಸಂ.27/2020 ಕಲಂ 406, 420 ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಾಗಿ ಆರೋಪಿಗಳಿಬ್ಬರೂ ದಸ್ತಗಿರಿಯಾಗಿ ನ್ಯಾಯಾಲಯದ ಜಾಮೀನಿನ ಮೇಲೆ ಇರುತ್ತಾರೆ. ನ್ಯಾಯಾಲಯವು ಜಾಮೀನು ಮಂಜೂರು ಆದೇಶದಲ್ಲಿ ಪ್ರತಿ 15 ದಿನಗಳಿಗೊಮ್ಮೆ ಭಾನುವಾರ ಬೆಳಿಗ್ಗೆ 9 ಗಂಟೆಯಿಂದ ಮದ್ಯಾಹ್ನ 3 ಗಂಟೆಯವರೆಗೆ ಸದರಿ ಪ್ರಕರಣದಲ್ಲಿ ದೋಷಾರೋಪಣಾ ಸಲ್ಲಿಸುವವರೆಗೂ ಹಾಜರಾಗಿ ತನಿಖೆಗೆ ಸಹಕರಿಸುವಂತೆ ನಿರ್ದೇಶನ ನೀಡಿರುತ್ತದೆ. ಸದರಿ ಆರೋಪಿಗಳು ಮೊದಲಿಗೆ ಒಂದೆರೆಡು ದಿನ ಹಾಜರಾಗಿ ನಂತರ ಗೈರಾಗಿರುತ್ತಾರೆ ಎಂದು ನನಗೆ ಶ್ರೀ ವೆಂಕಟೇಶಯ್ಯನವರು ತಿಳಿಸಿರುತ್ತಾರೆ. ನಂತರ ನಾನು ಸದರಿ ಪಿ.ಎಸ್.ಐ ಶ್ರೀ ವೆಂಕಟೇಶಯ್ಯನವರಿಗೆ ಆರೋಪಿಗಳಿಬ್ಬರನ್ನು ಅರ್ಜಿ ವಿಚಾರಣೆಗಾಗಿ ಠಾಣೆಗೆ ಕರೆಯಿಸುವಂತೆ ತಿಳಿಸಿರುತ್ತೇನೆ. ಅದರಂತೆ ಪಿ.ಎಸ್.ಐ ರವರು ಶ್ರೀಮತಿ ಅರ್ಚನ ರವರಿಗೆ ದೂರವಾಣಿ ಕರೆ ಮಾಡಿ ದಿನಾಂಕ.11.01.2021ರಂದು ಠಾಣೆಗೆ ಶ್ರೀಮತಿ ಅರ್ಚನ ಹಾಗೂ ಶ್ರೀ ನಾರಾಯಣಸ್ವಾಮಿ ರವರಿಬ್ಬರನ್ನು ಹಾಜರಾಗುವಂತೆ ತಿಳಿಸಿರುವುದಾಗಿ ನನಗೆ ವರದಿ ಮಾಡಿರುತ್ತಾರೆ. ಅದರಂತೆ ದಿನಾಂಕ.11.01.2021ರಂದು ಶ್ರೀಮತಿ ಅರ್ಚನ ರವರೊಬ್ಬರೆ ಠಾಣೆಗೆ ಹಾಜರಾಗಿದ್ದು, ಶ್ರೀಮತಿ ಅರ್ಚನಾರವರ ಗಂಡನ ಬಗ್ಗೆ ಕೇಳಲಾಗಿ, ಅವರು ಈ ದಿನ ಕೆಲಸದ ಮೇಲೆ ಹೋಗಿರುತ್ತಾರೆಂದು ತಿಳಿಸಿರುತ್ತಾರೆ. ಅರ್ಜಿದಾರರರಾದ ಶ್ರೀ ರಾಮಕೃಷ್ಣರವರು ಸಹ ಠಾಣೆಗೆ ಕರೆಯಿಸಿಕೊಂಡು ವಿಚಾರಣೆ ಮಾಡಲಾಗಿ, ಶ್ರೀಮತಿ ಅರ್ಚನ ರವರು ಶ್ರೀ ರಾಮಕೃಷ್ಣರವರೊಂದಿಗಿನ ಚೀಟಿ ವ್ಯವಹಾರ ಹಾಗೂ ಒಡವೆಯ ವಿಚಾರದ ವ್ಯವಹಾರವನ್ನು ಒಪ್ಪಿಕೊಂಡಿದ್ದು, ತಮ್ಮ ಮನೆಯನ್ನು ಇನ್ನು ಖಾಲಿ ಮಾಡಿರುವುದಿಲ್ಲ. ಮನೆಯಲ್ಲಿರುವ ಸಾಮಾನುಗಳನ್ನು ಕೊಡಿಸಿಕೊಡಿ ಎಂದು ಕೇಳಿರುತ್ತಾರೆ. ಈ ಬಗ್ಗೆ ನಾನು ನಿನ್ನ ಗಂಡ ಶ್ರೀ ನಾರಾಯಣಸ್ವಾಮಿಯನ್ನು ಕರೆದುಕೊಂಡು ಬನ್ನಿ ನೀವು ಬಂದ ಮೇಲೆ ಮನೆಯ ಮಾಲೀಕರನ್ನು ಸಹ ಕರೆಯಿಸಿ ಮಾತನಾಡಿಸುತ್ತೇನೆಂದು ತಿಳಿಸಿರುತ್ತೇನೆ.

ಅದಕ್ಕೆ ಶ್ರೀಮತಿ ಅರ್ಚನ ರವರಿಗೆ ಸದರಿ ಹಣವನ್ನು ಹಿಂದಿರುಗಿಸುವ ಬಗ್ಗೆ ಮತ್ತು ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿರುವ ಬಗ್ಗೆ ಪ್ರಶ್ನಿಸಲಾಗಿ, ಮಾರನೇ ದಿನ ಅಂದರೆ 12.01.2021 ರಂದು ತನ್ನ ಗಂಡನೊಂದಿಗೆ ಬಂದು ಉತ್ತರಿಸುವುದಾಗಿ ಹೇಳಿ ಹೋದವರು ಮತ್ತೇ ಠಾಣೆಗೆ ಹಾಜರಾಗಲಿಲ್ಲ.

ಆದರೆ ಸದರಿಯವರು ಈ ದೂರು ಅರ್ಜಿ ವಿಚಾರಣೆಯಿಂದ ತಪ್ಪಿಸಿಕೊಳ್ಳಲು ಮತ್ತು ಹಣವನ್ನು ಹಿಂದಿರುಗಿಸುವುದನ್ನು ತಪ್ಪಿಸಿಕೊಳ್ಳಲು ತಮ್ಮ ಡಿ.ಸಿ.ಪಿ ಸಾಹೇಬರವರ ಕಛೇರಿಗೆ ಹೋಗಿ ದೂರು ನೀಡಿದ್ದು, ಈ ಬಗ್ಗೆ ನಮ್ಮ ಡಿ.ಸಿ.ಪಿ ಸಾಯಹೇಬರು ನನಗೆ ವಿಚಾರಿಸಿದ್ದು, ನಾನು ದೂರುದಾರರುಗಳು ಠಾಣೆಗೆ ಬಂದು ಹೋಗುತ್ತಿದ್ದು, ಸದರಿ ಅರ್ಚನ ರವರು ವಿಚಾರಣೆಗೆ ಬರುತ್ತಿಲ್ಲವೆಂದು ತಿಳಿಸಿದೆನು. ಅದಕ್ಕೆ ನಮ್ಮ ಡಿ.ಸಿ.ಪಿ ಸಾಹೇಬರು ಈ ಬಗ್ಗೆ ದೂರು ನೀಡಿದ್ದಲ್ಲಿ ಪ್ರಕರಣ ದಾಖಲಿಸಿ, ತನಿಖೆ ಕೈಗೊಳ್ಳುವಂತೆ ಸೂಚಿಸಿದರು. ಆದರೆ ಶ್ರೀಮತಿ ಅರ್ಚನ ಮತ್ತು ಅವರ ಪತಿಯವರು ಹಣವನ್ನು ಹಿಂದಿರುಗಿಸುವುದರಿಂದ ತಪ್ಪಿಸಿಕೊಳ್ಳಲು ಹಾಗೂ ನ್ಯಾಯಾಲಯದ ಜಾಮೀನು ಆದೇಶದ ಷರತ್ತು ಉಲ್ಲಂಘನೆಯಾಗಿರುವ ವಿಚಾರದಲ್ಲಿ ರಕ್ಷಣಾ ದಾಖಲೆಗಳನ್ನು ಸೃಷ್ಟಿಸಿಕೊಳ್ಳಲು ನಮ್ಮಗಳ ಮೇಲೆ ಈ ಸುಳ್ಳು ಆಪಾದನೆ ಮಾಡಿರುವ ಅರ್ಜಿಯನ್ನು ಸಲ್ಲಿಸಿ ಅವರುಗಳ ಮೇಲೆ ನಮ್ಮ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ತನಿಖೆಯ ದಿಕ್ಕು ತಪ್ಪಿಸಲು ಹಾಗೂ ನಮ್ಮಗಳ ಆತ್ಮಸ್ಥೈರ್ಯವನ್ನು ಕುಗ್ಗಿಸುವ ಪ್ರಯತ್ನವನ್ನು ಮಾಡಿರುತ್ತಾರೆ. ಹಾಗೂ ಆಯೋಗಕ್ಕೆ ಸಲ್ಲಿಸಿರುವ ದೂರಿನಲ್ಲಿ ತಿಳಿಸಿರುವಂತೆ ನನ್ನ ಮೇಲೆ ಹೇಳಿರುವ ಆರೋಪಗಳು ಸುಳ್ಳಾಗಿರುತ್ತದೆ."

ದಿನಾಂಕ 06.11.2021 ರಂದು ದೂರುದಾರರ ಪತಿಯಾದ ಶ್ರೀ ನಾರಾಯಣಸ್ವಾಮಿ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆಯು ಕೆಳಕಂಡಂತೆ ಇದೆ:

ದಿನಾಂಕ.23.01.2020ರಂದು ಸಂಜೆ 5 ಗಂಟೆ ಸಮಯದಲ್ಲಿ ನಾನು, ನನ್ನ ಹೆಂಡತಿ ಹಾಗೂ ನನ್ನ ಮಗು ಶಂಕರ್ ಬೇಕರಿಯಲ್ಲಿ ಹಾಲು ತರಲು ಹೋದಾಗ ಒಬ್ಬ ಪುರಷ ಪಿ.ಸಿ, ಒಬ್ಬ ಮಹಿಳಾ ಪಿ.ಸಿ ನಮ್ಮ ಬಳಿ ಬಂದು ನಮ್ಮನ್ನು ರಸ್ತೆಯಲ್ಲೇ ಸಾಹೇಬರು ಕರೆಯುತ್ತಾ ಇದ್ದಾರೆ ಎಂದು ಹೇಳಿ ನಮ್ಮ ಆಟೋದಲ್ಲೆ ನಾನು, ನನ್ನ ಹೆಂಡತಿ ಹಾಗೂ ಒಬ್ಬ ಲೇಡಿ ಪಿಸಿ ರವರು ನಮ್ಮನ್ನು ಕೋಣನಕುಂಟೆ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ನಂತರ ಠಾಣೆಯಲ್ಲಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಧರ್ಮೇಂದ್ರ ರವರತ್ತಿರ ಕರೆದುಕೊಂಡು ಹೋದರು. ಆಗ ಅವರು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ವೆಂಕಟೇಶಯ್ಯ ರವರನ್ನು ಕರೆದು ಇವರನ್ನು ವಿಚಾರಣೆ ಮಾಡಿ ಕಾನೂನು ರೀತ್ಯ ಏನೇನು ಕ್ರಮ ವಹಿಸಬೇಕು ಅದರಂತೆ ಮಾಡಿ ಎಂದು ಹೇಳಿ ಹೊರಟು ಹೋದರು. ನನ್ನನ್ನು ಠಾಣೆಯಲ್ಲೇ ರಾತ್ರಿ ಇಟ್ಟಿದ್ದರು. ಆದರೆ ನನ್ನ ಹೆಂಡತಿ ಶ್ರೀಮತಿ ಅರ್ಚನ ರವರನ್ನು ಸ್ಟೇಟ್ ಹೋಂ ಗೆ ಕಳುಹಿಸಿ ಕೊಟ್ಟರು.

ಮಾರನೇ ದಿನ ಅಂದರೆ ದಿನಾಂಕ.24.01.2020 ರಂದು ನಾನು ಠಾಣೆಯಲ್ಲೇ ಇದ್ದೆ. ಆಗ ನನ್ನ ಹೆಂಡತಿಯನ್ನು ಸ್ಟೇಟ್ ಹೊಂ ನಿಂದ ಠಾಣೆಗೆ ಕರೆತಂದರು. ನನ್ನ ಹೆಂಡತಿ ಪಿರೀಯಡ್ಸ್ ಆಗಿದ್ದೀನಿ, ಪ್ಯಾಡ್ ತೆಗೆದುಕೊಳ್ಳಬೇಕು ಹಣ ಕೊಡಿ ಎಂದು ಕೇಳಿದಳು. ಆಗ ನನ್ನ ಹತ್ತಿರ ಪರ್ಸ್ ಇಲ್ಲ ಎಂದು ಹೇಳಿದೆ. ಕಾರಣ ನನ್ನ ಪರ್ಸ್ ಹಾಗೂ ಮೊಬೈಲ್ ಅನ್ನು ದಿನಾಂಕ.23.01.2020 ರಂದು ನನ್ನನ್ನು ಠಾಣೆಗೆ ಕರೆತಂದಾಗ ಕಿತ್ತು ಕೊಂಡಿದ್ದರು. ದಿನಾಂಕ.24.01.2020 ರಂದು ನನ್ನ ಸ್ಟೇಟ್‌ಮೆಂಟ್ ಆದ ಮೇಲೆ ನನ್ನನ್ನು ಠಾಣೆಯಲ್ಲೇ ಇಟ್ಟುಕೊಂಡರು. ನನ್ನ ಹೆಂಡತಿಯನ್ನು ಸ್ಟೇಟ್ ಹೋಂ ಗೆ ಕರೆದುಕೊಂಡು ಹೋದರು. ಮಾರನೇ ದಿನ ಅಂದರೆ ದಿನಾಂಕ.25.01.2020 ರಂದು ನನ್ನ ಹೆಂಡತಿಯನ್ನು ಸ್ಟೇಟ್ ಹೋಂ ನಿಂದ ಕರೆತಂದು ದೊಡ್ಡಕಲ್ಲಸಂದ್ರದಲ್ಲಿರುವ ನಮ್ಮ ಮನೆಗೆ ಕರೆದುಕೊಂಡು ಹೋದರು. ಅಲ್ಲಿಂದ ಮೆಡಿಕಲ್ ಚೆಕಪ್ ಮಾಡಿಸಿ ನಂತರ ನನ್ನನ್ನು ಹಾಗೂ ನನ್ನ ಹೆಂಡತಿಯನ್ನು ಕೋರ್ಟ್‌ಗೆ ಹಾಜರುಪಡಿಸಿದರು.

ದಿನಾಂಕ 06.11.2021 ರಂದು ದೂರುದಾರರಾದ ಶ್ರೀಮತಿ ಅರ್ಚನ ರವರ ಮುಂದುವರೆದ ಹೇಳಿಕೆಯು ಕೆಳಕಂಡಂತೆ ಇದೆ:

ದಿನಾಂಕ.23.01.2020 ರಂದು ಕೋಣನಕುಂಟೆ ಪೊಲೀಸ್ ಠಾಣೆಯಿಂದ ನನ್ನನ್ನು ಸ್ಟೇಟ್ ಹೋಂ ಗೆ ಕಳುಹಿಸುವ ಅವಶ್ಯಕತೆ ಇರಲಿಲ್ಲ. ಏಕೆಂದರೆ ಠಾಣೆಯ ಹೊರಗೆ ನೆರೆದಿದ್ದ ಜನಗಳಿಂದ ನನಗೆ ಯಾವುದೇ ಪ್ರಾಣಾಪಾಯವಿರಲಿಲ್ಲ. ಏಕೆಂದರೆ ನಾನು ಚೀಟಿ ನಡೆಸುತ್ತಿದ್ದ ಜನಗಳಿಗೆ ನನ್ನ ಮನೆ ಗೊತ್ತಿದೆ. ಅವರುಗಳು ನನಗೆ ಯಾವುದೇ ತೊಂದರೆ ಕೊಡುತ್ತಿರಲಿಲ್ಲ.

ದಿನಾಂಕ.11.01.2021 ರಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ವೆಂಕಟೇಶಯ್ಯ ರವರು ಹೊಸ ಇನ್ಸ್‌ಪೆಕ್ಟರ್ ವಿಚಾರಣೆ ಮಾಡಬೇಕಂತೆ ಎಂದು ಕರೆ ಬಂದ ಮೇರೆಗೆ ನಾನು ಠಾಣೆಗೆ ಹೋದೆ. ಅಲ್ಲಿ ಶ್ರೀ ವೆಂಕಟೇಶಯ್ಯನವರಿಗೆ ಕರೆ ಮಾಡಿದೆ, ಆಗ ಅವರು ನಾನು ಕೋರ್ಟ್‌ನಲ್ಲಿದ್ದೀನಿ, ಸಂಜೆ ಬಂದು ನೋಡು ಎಂದು ಹೇಳಿದರು. ಆಗ ಅಲ್ಲೆ ಛೇಂಬರ್‌ನ ಒಳಗೆ ಹೋದೆ. ಅಲ್ಲಿ ಶ್ರೀ ಆನಂದ್, ಜ್ಯೋತಿ ಇನ್ನು ಮುಂತಾದವರು ಅಲ್ಲಿ ಇದ್ದರು. ಪಿ.ಐ ಶ್ರೀ ನಂಜೇಗೌಡ ರವರು, ದೂರುದಾರರಾದ ಶ್ರೀ ರಾಮಕೃಷ್ಣ ರವರ ಅರ್ಜಿಯ ಬಗ್ಗೆ ವಿಚಾರಿಸಿದರು. ಆಗ ನಾನು ಅವರಿಗೆ ಸರ್ ನನ್ನ ಮನೆ ಐಟಂಗಳನ್ನು ಶ್ರೀ ಆನಂದ್ ರವರಿಂದ ಕೊಡಿಸಿ ಕೊಡುವಂತೆ ಕೇಳಿದೆ. ಆಗ ಶ್ರೀ ಆನಂದ್‌ರವರು, ನನಗೆ ನೀನು ದುಡ್ಡು ಕೊಟ್ಟರೆ ಮಾತ್ರ ನಾನು ಮನೆಯ ಸಾಮಾನುಗಳನ್ನು ಕೊಡುತ್ತೇನೆಂದು ಹೇಳಿದರು. ಶ್ರೀ ಆನಂದ್ ರವರ ಪತ್ನಿ ಶ್ರೀಮತಿ ಜ್ಯೋತಿ ರವರು ನನಗೆ ನೀನು ಏಕೆ ಮಾನವ ಹಕ್ಕುಗಳ ಆಯೋಗಕ್ಕೆ ದೂರು ಕೊಟ್ಟಿದ್ದೀ ಎಂದು ನನಗೆ ಹೊಡೆಯಲು ಬಂದರು. ನಂತರ ಪಿ.ಐ ಶ್ರೀ ನಂಜೇಗೌಡ ಸಾಹೇಬರು ನನಗೆ ನಿನ್ನ ಗಂಡನನ್ನು ಕರೆದುಕೊಂಡು ಬಾ ಎಂದು ಹೇಳಿ ನನ್ನ ಸಹಿ ತೆಗೆದುಕೊಂಡು

ಕಳುಹಿಸಿದರು. ಆದರೆ ಪಿ.ಐ ರವರ ಮುಂದೆ ಹಾಜರಾಗಲು ನನಗೆ ಭಯವಾಗಿದ್ದರಿಂದ ನಾನು ಪುನ: ಠಾಣೆಗೆ ಹೋಗಲಿಲ್ಲ.

ಶ್ರೀ ಧರ್ಮೇಂದ್ರ ರವರು ದಿನಾಂಕ: 23.01.2020 ರಂದು ಬೆಳಿಗ್ಗೆ 09.00 ಗಂಟೆಗೆ ಠಾಣೆಗೆ ಕರ್ತವ್ಯಕ್ಕೆ ಬಂದು, ನಂತರ ನಮ್ಮ ಠಾಣೆ ಮೊ.ಸಂಖ್ಯೆ: 25/2020 ರಲ್ಲಿ ತನಿಖೆಯ ಸಲುವಾಗಿ ಹೊರಗೆ ಹೋಗಿರುತ್ತೇನೆ. ಸಂಜೆ ಸುಮಾರು 04.00 ಗಂಟೆಯ ಸಮಯದಲ್ಲಿ ತಮ್ಮ ಠಾಣೆಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ವೆಂಕಟೇಶಯ್ಯರವರು ತಿಳಿಸಿದ್ದೆನೆಂದರೆ, ಶ್ರೀಮತಿ ಜಾಹ್ನವಿ @ ಸ್ವಪ್ನ ಕೋಂ ಪದ್ಮನಾಭ ಎಂಬುವವರು ಹಾಗೂ ಅವರ ಜೊತೆಯಲ್ಲಿ ಸುಮಾರು 15 ಕ್ಕೂ ಹೆಚ್ಚು ಮೋಸ ಹೋದ ಜನರು ಆರೋಪಿಗಳಾದ ಶ್ರೀಮತಿ ಅರ್ಚನ ಹಾಗೂ ನಾರಾಯಣಸ್ವಾಮಿ ರವರುಗಳು ಸುಮಾರು 66,46,200/- ರೂಗಳು ಚೀಟಿ ಹಣವನ್ನು ಕಟ್ಟಿಸಿಕೊಂಡು ಚೀಟಿ ಹಣವನ್ನು ವಾಪಸ್ ನೀಡದೇ ಮೋಸ ಮಾಡಿರುತ್ತಾರೆಂದು ಅವರುಗಳ ವಿರುದ್ದ ದೂರು ನೀಡಿರುವುದಾಗಿ ತಿಳಿಸಿದ್ದು, ಅದಕ್ಕೆ ಶ್ರೀ ಧರ್ಮೇಂದ್ರ ರವರು ಆ ದೂರನ್ನ ಪಡೆದು ವಿಚಾರಣೆ ಮಾಡಿ ಕಾನೂನು ರೀತ್ಯಾ ಕ್ರಮ ಜರುಗಿಸುವಂತೆ ಪಿ.ಎಸ್.ಐ ಶ್ರೀ ವೆಂಕಟೇಶಯ್ಯ ರವರಿಗೆ ಸೂಕ್ತ ತಿಳುವಳಿಕೆ ನೀಡಿದ್ದು, ಅದರಂತೆ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಶ್ರೀ ವೆಂಕಟೇಶಯ್ಯ ರವರು ಪಿರ್ಯಾದುದಾರರಾದ ಶ್ರೀಮತಿ ಜಾಹ್ನವಿ ನೀಡಿರುವ ದೂರಿನ ಮೇರೆಗೆ ಅರ್ಚನ ಮತ್ತು ಆಕೆಯ ಗಂಡ ಶ್ರೀ ನಾರಾಯಣಸ್ವಾಮಿ ರವರ ವಿರುದ್ದ ಠಾಣಾ ಮೊ.ಸಂಖ್ಯೆ: 27/2020 ಕಲಂ 406, 420 ಐ.ಪಿ.ಸಿ ಮತ್ತು ಕಲಂ 76 ಚಿಟ್ ಫಂಡ್ ಆಕ್ಟ್ ರೀತ್ಯ ಪ್ರಕರಣ ದಾಖಲಿಸಿ ಅವರುಗಳನ್ನು ವಿಚಾರಣೆ ಮಾಡಿ ದಸ್ತಗಿರಿ ಕ್ರಮ ಅನುಸರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿ, ಪ್ರಕರಣದಲ್ಲಿ ತನಿಖೆ ಕೈಗೊಂಡಿರುತ್ತಾರೆ. ಹಾಲಿ ಸದರಿ ಪ್ರಕರಣವು ತನಿಖೆಯಲ್ಲಿರುವುದಾಗಿ ತಿಳಿದು ಬಂದಿರುತ್ತದೆ. ಪಿರ್ಯಾದುದಾರರು ಹಾಗೂ ಮೋಸಕ್ಕೆ ಒಳಗಾದ ಸಾರ್ವಜನಿಕರು ಅನೇಕ ಬಾರಿ ಠಾಣೆಗೆ ಹಾಜರಾಗಿ ನಾನು ಚೀಟಿ ಹಾಕಿರುವ ಹಣವನ್ನು ವಾಪಸ್ಸು ಕೊಡಿಸಿ, ಆದರೆ ನಾವುಗಳು ಅವರುಗಳ ವಿರುದ್ದ ಪ್ರಕರಣವನ್ನು ದಾಖಲಿಸುವುದಿಲ್ಲ ಎಂದು ಹೇಳಿರುತ್ತಾರೆ. ಶ್ರೀ ಧರ್ಮೇಂದ್ರ ರವರು ಠಾಣೆಯ ಬೇರೆ ಪ್ರಕರಣಗಳ ತನಿಖೆಯ ಮೇರೆಗೆ ಠಾಣೆ ಹೊರಗೆ ಹೋಗಿದ್ದರಿಂದ ಆರೋಪಿಗಳನ್ನು ವಿಚಾರಣೆ ಮಾಡಿರುವುದಿಲ್ಲ. ದಿನಾಂಕ: 23.01.2020 ರಂದು ರಾತ್ರಿ 09.00 ಗಂಟೆಯ ಸಮಯದಲ್ಲಿ ತಾನು ಠಾಣಾ ಪ್ರಕರಣದಲ್ಲಿ ತನಿಖಾಗಾಗಿ ಹೊರಗೆ ಹೋಗಿದ್ದು, ಅರ್ಜಿದಾರರು ಅವರ ದೂರು ಅರ್ಜಿಯಲ್ಲಿ ತಿಳಿಸಿರುವಂತೆ ಪೊಲೀಸ್ ಹೆಡ್ ಕಾನ್ಸಟೇಬಲ್ ಆನಂದ್ ರವರು ಶ್ರೀಮತಿ ಅರ್ಚನ ಮತ್ತು ಆಕೆಯ ಗಂಡ ನಾರಾಯಣಸ್ವಾಮಿ ರವರುಗಳನ್ನು ತನ್ನ ಮುಂದೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ. ಸದರಿ ಪ್ರಕರಣದ ಬಗ್ಗೆ ತನಿಖಾಧಿಕಾರಿಯಾದ ಪಿ.ಎಸ್.ಐ ಶ್ರೀ ವೆಂಕಟೇಶಯ್ಯ ರವರಿಗೆ ವಿಚಾರಣೆ ಮಾಡಿ ಕಾನೂನು ರೀತ್ಯ ಕ್ರಮ

ಜರುಗಿಸುವಂತೆ ಸೂಕ್ತ ತಿಳುವಳಿಕೆ ನೀಡಿರುತ್ತೇನೆ. ದಿನಾಂಕ: 23.01.2020 ರಂದು ತಾನು ಬೆಳಿಗ್ಗೆ 09.00 ಗಂಟೆಗೆ ತಮ್ಮ ಠಾಣಾ ಮೊ.ಸಂಖ್ಯೆ: 25/2020 ರಲ್ಲಿ ತನಿಖೆಗಾಗಿ ಹೊರಗೆ ಹೋಗಿದ್ದು, ನಂತರ ಠಾಣೆಗೆ ರಾತ್ರಿ 10.15 ಗಂಟೆಗೆ ವಾಪಸ್ ಬಂದು ರಾತ್ರಿ ಗಸ್ತು ಕರ್ತವ್ಯಕ್ಕೆ ತೆರಳಿದ್ದು, ನಂತರ ಮರುದಿನ ರಾತ್ರಿ ಗಸ್ತು ವಿಶ್ರಾಂತಿ ಮುಗಿಸಿ ಮಧಾಹ್ನ ಠಾಣೆಗೆ ಬಂದಿದ್ದು, ಆಗ ಪಿ.ಎಸ್.ಐ ಶ್ರೀ ವೆಂಕಟೇಶಯ್ಯರವರು ದಿನಾಂಕ: 23.01.2020 ರಂದು ಶ್ರೀಮತಿ ಅರ್ಚನ ರವರನ್ನು ರಾಜ್ಯ ಮಹಿಳಾ ನಿಲಯದಲ್ಲಿ ಇರಿಸಿರುವ ವಿಚಾರವನ್ನು ತನ್ನ ಗಮನಕ್ಕೆ ತಂದಿರುವುದಿಲ್ಲ. ಆದರೆ ದಿನಾಂಕ: 24.01.2020 ರಂದು ಶ್ರೀಮತಿ ಅರ್ಚನ ರವರನ್ನು ರಾಜ್ಯ ಮಹಿಳಾ ನಿಲಯದಲ್ಲಿ ಇರಿಸಿರುವ ವಿಚಾರವನ್ನು ಹಾಗೂ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ವಿಚಾರವನ್ನು ತನಗೆ ತಿಳಿಸಿರುತ್ತಾರೆಂದು ಹಾಗೂ ಸದರಿ ಆರೋಪಿತೆಯು ಮಾನ್ಯ ನ್ಯಾಯಾಲಯದಲ್ಲಿ ಹಾಜರುಪಡಿಸುವ ಸಮಯದಲ್ಲಿ ಆಕೆಯು ಪೊಲೀಸ್ ರವರ ವಿರುದ್ದ ಯಾವುದೇ ರೀತಿಯ ಅಪಾದನೆಯನ್ನು ಮಾಡಿರುವುದಿಲ್ಲ. ಅದಲ್ಲದೇ ಆಕೆಯನ್ನು ನಾವು ಅಕ್ರಮ ಬಂಧನದಲ್ಲಿರಿಸಿರುವುದಾಗಿ ಮಾನ್ಯ ನ್ಯಾಯಾಧೀಶರ ಮುಂದೆ ಆಪಾದಿಸಿರುವುದಿಲ್ಲ. ತನ್ನ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಹಾಲಿ ನಿವೃತ್ತ ಹೊಂದಿರುವ ಪಿ.ಎಸ್.ಐ ಶ್ರೀ ವೆಂಕಟೇಶಯ್ಯರವರು ಆ ದಿನ ಠಾಣೆಯಲ್ಲಿ ಆರೋಪಿತರ ವಿರುದ್ದ ದೂರು ನೀಡಲು ಸುಮಾರು ಜನ ಸೇರಿದ್ದು, ಶ್ರೀಮತಿ ಅರ್ಚನಾರವರ ವಿರುದ್ದ ಆಕ್ರೋಶ ಭರಿತ ಹಲ್ಲೆ ಮಾಡುವ ಸಂಭವವಿದ್ದರಿಂದ ಆರೋಪಿತೆಯ ಹಿತ ದೃಷ್ಟಿಯಿಂದ ಸುರಕ್ಷತೆಯ ಬಗ್ಗೆ ಕಾಳಜಿವಹಿಸಿ ಮತ್ತು ಆಕೆಯನ್ನು ಠಾಣೆಯಿಂದ ಹೊರಗಡೆ ಕಳುಯಿಸಿದರೆ ಆಕೆಯ ಮೇಲೆ ಹಲ್ಲೆ ಮಾಡಿ ಪ್ರಾಣ ಹಾನಿಯಾಗುವ ಸಂಭವಿವದ್ದರಿಂದ ಹಾಗೂ ಪ್ರಕರಣದಲ್ಲಿ ಆರೋಪಿತೆಯನ್ನು ದಸ್ತಗಿರಿ ಮಾಡಲು ಆ ವೇಳೆಯಾಗಿದ್ದರಿಂದ ಆಕೆಯನ್ನು ಸುರಕ್ಷಿತವಾಗಿ ಮಹಿಳಾ ನಿರೀಕ್ಷಣಾ ನಿಲಯದಲ್ಲಿ ಈ ಪ್ರಕರಣದ ತನಿಖಾಧಿಕಾರಿಯಾದ ಪಿ.ಎಸ್.ಐ ಶ್ರೀ ವೆಂಕಟೇಶಯ್ಯರವರು ಇಟ್ಟಿರುತ್ತಾರೆ. ತಾನು ಪಿರ್ಯಾದುದಾರರಾದ ಶ್ರೀಮತಿ ಅರ್ಚನ ಹಾಗೂ ಅವರ ಗಂಡ ಶ್ರೀ ನಾರಾಯಣಸ್ವಾಮಿರವರುಗಳಿಗೆ ಮಾನಸಿಕ ಹಾಗೂ ದೈಹಿಕವಾಗಿ ಯಾವುದೇ ರೀತಿಯಾಗಿ ಕಿರುಕುಳ ನೀಡಿರುವುದಿಲ್ಲ. ಅರ್ಜಿದಾರರು ತನ್ನ ವಿರುದ್ದ ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತವೆ. ಆದ್ದರಿಂದ ಮೇಲ್ಕಂಡ ಆರೋಪಗಳಿಂದ ತನ್ನನ್ನು ದೋಷ ಮುಕ್ತಗೊಳಿಸಬೇಕಾಗಿ ಮಾನ್ಯರಲ್ಲಿ ಕಳಕಳಿಯಿಂದ ಬೇಡಿಕೊಳ್ಳುತ್ತೇನೆಂದು ಶ್ರೀ ಧರ್ಮೇಂದ್ರ ಟಿ.ಎಂ. ರವರು ಅವರ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.

ಶ್ರೀ ಆನಂದ.ಎಂ ರವರು ಶ್ರೀಮತಿ ಅರ್ಚನ ಮತ್ತು ಆಕೆಯ ಗಂಡ ನಾರಾಯಣಸ್ವಾಮಿ ಮತ್ತು ಒಬ್ಬಳೇ ಮಗಳು ಆರಾಧನ ಎಂಬುವರೊಂದಿಗೆ ಈಗ್ಗೆ ಸುಮಾರು 10 ವರ್ಷದಿಂದ ನನ್ನ ವಾಸದ ಮನೆಯ 1ನೇ ಮಹಡಿಯಲ್ಲಿರುವ 1 ಬಿ.ಹೆಚ್.ಕೆ ಮನೆಯಲ್ಲಿ ಬಾಡಿಗೆಗೆ ವಾಸವಿದ್ದರು. ಶ್ರೀ ನಾರಾಯಣಸ್ವಾಮಿ ಈತನು ಆಟೋ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದನು. ಈತನು ಮೊದಲು ಆತನು ವಾಸವಿದ್ದಂತಹ

ನಮ್ಮ ಬಾಡಿಗೆಯ ಮನೆಯಲ್ಲಿ ಜನರನ್ನು ಸೇರಿಸಿಕೊಂಡು ಚೀಟಿಗಳನ್ನು ಮಾಡಲು ಪ್ರಾರಂಭಿಸಿದ್ದು, ಇದನ್ನು ನಾವು ಆಕ್ಷೇಪಿಸಿದ್ದು, ಆತನು ಅಲ್ಲಿ ಚೀಟಿ ನಡೆಸದೇ ಎ.ಕೆ ಕಾಲೋನಿಗೆ ಹೋಗುವ ರಸ್ತೆಯಲ್ಲಿ ಆತನ ಆರಾಧನಾ ಪ್ಯಾಷನ್ಸ್ ಎಂಬ ಅಂಗಡಿಯಲ್ಲಿ ನಡೆಸಲು ಪ್ರಾರಂಭಿಸಿದನು. ಅರ್ಚನ ಮತ್ತು ಅವರ ಗಂಡ ಬಹಳ ನಂಬಿಕೆಯಿಂದ ನಮ್ಮ ಜೊತೆ ಇದ್ದರು. ಇವರು ಕಷ್ಟಗಳಿಗೆ ನಮ್ಮ ಬಳಿ ಹಣದ ಸಹಾಯವನ್ನು ಪಡೆದುಕೊಂಡು ಆಗಿಂದಾಗ್ಗೆ ಹಿಂದಿರುಗಿಸುತ್ತಿದ್ದರು. ಇವರು ಜನರಿಗೆ ಚೀಟಿ ಹಾಕುವ ನೆಪದಲ್ಲಿ ಮತ್ತು ಸುಳ್ಳು ಹೇಳುತ್ತಾ ಬಡ ಕೂಲಿ ಕೆಲಸ ಮಾಡುವ ಹೆಂಗಸರನ್ನು ನಂಬಿಸಿ ಅವರಿಂದ ಅಪಾರ ಮೊತ್ತದ ಹಣ ಮತ್ತು ಕಾರ್ಯಕ್ರಮಗಳಿಗೆಂದು ನಂಬಿಸಿ ಚಿನ್ನದ ಒಡವೆಗಳನ್ನು ತೆಗೆದುಕೊಂಡು ಹೋಗಿ ಅವನ್ನು ವಾಪಸ್ಸು ಕೊಡದೇ ಗಿರಿವಿ ಇಟ್ಟುಕೊಂಡು ಮೋಸ ಮಾಡಿರುತ್ತಾರೆ. ನಮ್ಮನ್ನು ನಂಬಿಸಿ ನನ್ನಿಂದ ಹಾಗೂ ನನ್ನ ಹೆಂಡತಿ ಜ್ಯೋತಿ.ಆರ್ ಇಬ್ಬರೂ ಸೇರಿ ಸುಮಾರು 08 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿರುತ್ತಾರೆ. ಅಲ್ಲದೇ ನಮ್ಮದೇ ಚಿನ್ನದ ಸರವನ್ನು ತನ್ನ ನಾದಿನಿಯ ಮದುವೆಗೆ ಕಾರ್ಯಕ್ಕೆಂದು ತೆಗೆದುಕೊಂಡು ಹೋಗಿ ಅದನ್ನು ಗಿರಿವಿ ಇಟ್ಟುಕೊಂಡಿದ್ದು, ಒತ್ತಾಯ ಮಾಡಿಸಿ ಅದನ್ನು ಬಿಡಿಸಿಕೊಂಡಿರುತ್ತೇವೆ. ನಮ್ಮ ಬಳಿಯೇ ಅಲ್ಲದೇ ಇದೇ ದೊಡ್ಡಕಲ್ಲಸಂದ್ರ ಹಾಗೂ ಸುತ್ತ ಮುತ್ತಲ ಅಮಾಯಕ ಜನರಿಂದ ವಿವಿಧ ಕಾರಣಗಳನ್ನು ಹೇಳಿ ಸುಮಾರು 25ಕ್ಕೂ ಹೆಚ್ಚು ಜನರನ್ನು ನಂಬಿಸಿ ಸುಮಾರು 35 ಲಕ್ಷ ರೂಪಾಯಿಗೂ ಅಧಿಕ ಹಣವನ್ನು ಪಡೆದುಕೊಂಡು ಮೋಸ ಮಾಡಿ ಗಂಡ ಮತ್ತು ಮಗಳನ್ನು ಬಿಟ್ಟು ಕಳೆದ ವರ್ಷ ಸೆಪ್ಟಂಬರ್ ತಿಂಗಳಿನಲ್ಲಿ ಓಡಿ ಹೋಗಿದ್ದು, ಈಕೆಯು ಈ ರೀತಿ ಓಡಿ ಹೋದ ವಿಷಯ ತಿಳಿದು ಈಕೆಯಿಂದ ಮೋಸ ಹೋದಂತಹ ಅಮಾಯಕ ಹೆಂಗಸರು ಮತ್ತು ಆಟೋ ಚಾಲಕರು ಹಾಗು ಕೂಲಿ ಕೆಲಸದವರು ಹುಡುಕಿಕೊಂಡು ನಮ್ಮ ಮನೆಯ ಬಳಿ ಬರುತ್ತಿದ್ದರು. ಇದನ್ನು ನೋಡಿದ ಆಕೆಯ ಗಂಡ ನಾರಾಯಣಸ್ವಾಮಿ ಈತನೇ ಹೆಂಡತಿಯನ್ನು ಬಚ್ಚಿಟ್ಟು ನಾಟಕವಾಗಿ ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ಹೆಂಡತಿ ಕಾಣೆಯಾಗಿದ್ದಾಳೆಂದು ಮಿಸ್ಸಿಂಗ್ ಕೇಸು ಹಾಕಿಸಿದ್ದು, ಅನಂತರ ಪೊಲೀಸರು ಆಕೆಯನ್ನು ಪತ್ತೆ ಮಾಡಿದ್ದರು. ಇದಾದ ನಂತರ ಪುನ: ಆಕೆಯು ಸಾಲ ಕೊಟ್ಟವರಿಗೆ ಸಿಗದೇ ಇದ್ದಾಗ, ಆಕೆಯ ಗಂಡನೂ ಸಹಾ ಕಳೆದ ವರ್ಷ ಡಿಸೆಂಬರ್ ತಿಂಗಳಿನಿಂದ ಮನೆಗೆ ಬರದೇ ತಪ್ಪಿಸಿಕೊಂಡನು. ಗಂಡ–ಹೆಂಡತಿ ಇಬ್ಬರೂ ಅಪಾರ ಮೊತ್ತದ ಹಣವನ್ನು ಲಪಟಾಯಿಸಿ ತೆಗೆದುಕೊಂಡು ಹೋಗಿದ್ದನು ಅರಿತ ಮೋಸ ಹೋದಂತಹ ಜನರು ದಿನಾಂಕ: 23.01.2020 ರಂದು ಇದೇ ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿ ಮೊ.ಸಂಖ್ಯೆ: 27/2020 ಕಲಂ 406, 420 ಐಪಿಸಿ ಸಹಿತ 76 ಆಫ್ ಚಿಟ್ ಫಂಡ್ ಆಕ್ಟ್ ರೀತ್ಯಾ ಕೇಸನ್ನು ದಾಖಲಿಸಿದ್ದು, ಗಂಡ–ಹೆಂಡತಿ ಇಬ್ಬರನ್ನು ಪೊಲೀಸರು ದಸ್ತಗಿರಿ ಪಡಿಸಿರುವ ವಿಷಯವು ನನಗೆ ತಿಳಿದಿರುತ್ತದೆ. ಅರ್ಚನ ಹಾಗೂ ಆಕೆಯ ಗಂಡ ನಾರಾಯಣಸ್ವಾಮಿ ಇವರ ವಿರುದ್ದ ದಾಖಲಿಸಿದ ಮೋಸ–ವಂಚನೆ ಕೇಸಿನಲ್ಲಿ ಇವರಿಗೆ ಸುಮಾರು 30 ಲಕ್ಷಕ್ಕೂ ಹೆಚ್ಚು ಹಣ ನೀಡಿ ಮೋಸ ಹೋದಂತಹ ಶ್ರೀಮತಿ

ಜಾಹ್ನವಿ @ ಸ್ವಪ್ನ ಕೋಂ ಪದ್ಮಾನಾಭ, ವಾಸ ನಂ.317, 6ನೇ ಕ್ರಾಸ್, 2ನೇ ಮೈನ್, ಎಂ.ಕೆ.ಎಸ್ ಲೇಔಟ್, ನಾರಾಯಣ ನಗರ, 1ನೇ ಬ್ಲಾಕ್, ಬೆಂಗಳೂರು: 62, ಮೊ: 9980146345 ಆಗಿರುತ್ತಾರೆ. ಈ ದೂರಿನಲ್ಲಿ ನನ್ನ ಹೆಂಡತಿ ಶ್ರೀಮತಿ ಜ್ಯೋತಿ.ಆರ್ ಇವರೂ ಸಹಾ ಒಬ್ಬ ಮೋಸ ಹೋದವರಾಗಿದ್ದು ವಿವರಗಳನ್ನು ದೂರಿನಲ್ಲಿ ನಮೂದು ಮಾಡಲಾಗಿರುತ್ತದೆ.

ಮೇಲೆ ತಿಳಿಸಿದ ಅರ್ಜಿದಾರರಾದ ಶ್ರೀಮತಿ ಅರ್ಚನ ಹಾಗೂ ಆಕೆಯ ಗಂಡ ನಾರಾಯಣಸ್ವಾಮಿ ಇಬ್ಬರೂ ಕೇಸಿನಲ್ಲಿ ದಸ್ತಗಿರಿಯಾದಾಗಿನಿಂದ ನಮ್ಮ ಮನೆಯ ಕಡೆ ಬಂದಿರುವುದಿಲ್ಲ. ಇವರುಗಳಿಂದ ನಮಗೂ ಸಹಾ ಸುಮಾರು 08 ಲಕ್ಷ ರೂಪಾಯಿಗಳಷ್ಟು ಮೋಸವಾಗಿದ್ದು, ನ್ಯಾಯಕ್ಕಾಗಿ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿ ಕೇಸು ದಾಖಲಿಸಿರುತ್ತೇವೆ. ನಾನು ಪೊಲೀಸ್ ಇಲಾಖೆಯಿಂದ ಇದ್ದೇನೆಂದು ಯಾವುದೇ ರೀತಿಯಲ್ಲಿ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿರುವುದಿಲ್ಲ. ಅರ್ಜಿದಾರರು ಸುಮಾರು 65 ಲಕ್ಷಕ್ಕೂ ಅಧಿಕ ಮೊತ್ತದ ಹಣವನ್ನು ಅಮಾಕಯ ಜನರಿಂದ ಪಡೆದುಕೊಂಡು ಹಿಂದಿರುಗಿಸದೇ ಮೋಸ ಮಾಡಿದ್ದು, ಅವರ ಮೋಸದಾಟದಿಂದ ತಪ್ಪಿಸಿಕೊಳ್ಳುವ ದುರುದ್ದೇಶದಿಂದ ಈ ರೀತಿಯಾಗಿ ಮಾನ್ಯ ಆಯೋಗದಲ್ಲಿ ಆಧಾರರಹಿತ ಸುಳ್ಳು ಅರ್ಜಿಯನ್ನು ನೀಡಿರುತ್ತಾರೆ.

ಖಾವಂದಿರುವ ನೋಟೀಸಿನಲ್ಲಿ ಸ್ಪಷ್ಟ ಪಡಿಸಿದಂತೆ ನಾನು ಯಾವುದೇ ರೀತಿಯಲ್ಲಿ ಅಧಿಕಾರ ದುರುಪಯೋಗ ಪಡಿಸಿಕೊಂಡಿರುವುದಿಲ್ಲ ಹಾಗೂ ನಾನಗಲೀ ಅಥವಾ ನನ್ನ ಹೆಂಡತಿಯಾಗಲೀ ಬಡ್ಡಿ ವ್ಯವಹಾರ ಮತ್ತು ಚೀಟಿಯನ್ನು ನಡೆಸುತ್ತಿರಲಿಲ್ಲ. ನಾವು ಸಹಾ ಹಣ ಕೊಟ್ಟು ಎಲ್ಲರಂತೆ ಶ್ರೀಮತಿ ಅರ್ಚನ ಮತ್ತು ನಾರಾಯಣಸ್ವಾಮಿ ರವರಿಂದ ಮೋಸ ಹೋದವರಾಗಿದ್ದು, ನಮಗೆ ನ್ಯಾಯ ದೊರಕಿಸಿಕೊಡಬೇಕೆಂದು ಕಳಕಳಿಯಿಂದ ಬೇಡಿಕೊಳ್ಳುತ್ತೇನೆಂದು ಶ್ರೀ ಆನಂದ್ ಎಂ. ರವರು ಅವರ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ಶ್ರೀಮತಿ ಅರ್ಚನ ರವರು ನೀಡಿರುವ ಮರು ಹೇಳಿಕೆಯಲ್ಲಿ ದಿನಾಂಕ:23.01.2020ರಂದು ಪೊಲೀಸ್ ಸಿಬ್ಬಂದಿಯಾದ ಶ್ರೀ ಶಶಿಕುಮಾರ್ ಹಾಗೂ ಮಹಿಳಾ ಪೊಲೀಸ್ ಸಿಬ್ಬಂದಿಯವರುಗಳು ಶ್ರೀಮತಿ ಅರ್ಚನ ಹಾಗೂ ಆಕೆಯ ಗಂಡನಾದ ನಾರಾಯಣಸ್ವಾಮಿರವರುಗಳನ್ನು ಕೋಣನಕುಂಟೆ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರೆಂದು ತಿಳಿಸಿದ್ದು, ಇದರ ಬಗ್ಗೆ ಪರಿಶೀಲಿಸುವ ಸಲುವಾಗಿ ಕೋಣನಕುಂಟೆ ಪೊಲೀಸ್ ಠಾಣೆಯ ಸಿಬ್ಬಂದಿಯಾದ ಶ್ರೀ ಶಶಿಕುಮಾರ್, ದೂರುದಾರರಾದ ಶ್ರೀಮತಿ ಅರ್ಚನ ಹಾಗೂ ಅವರ ಗಂಡ ಶ್ರೀ ನಾರಾಯನಸ್ವಾಮಿ ರವರುಗಳನ್ನು ದಿನಾಂಕ 04.12.2021ರಂದು ಆಯೋಗದ ಮುಂದೆ ಹಾಜರಾಗಲು ಆದೇಶಿಸಲಾಗಿದೆ.

ಆನಂತರ, ಶ್ರೀ ಆನಂದ್. ಎಂ. ಹೆಚ್.ಸಿ.6213, ಸುದ್ದಗುಂಟೆಪಾಳ್ಯ ಪೊಲೀಸ್ ಠಾಣೆ ರವರು ಆಯೋಗಕ್ಕೆ ದಿನಾಂಕ 09.11.2021ರ ಪತ್ರವನ್ನು ಸಲ್ಲಿಸಿದ್ದು, ಸದರಿ ಪತ್ರದಲ್ಲಿ ತಾನು ದಿನಾಂಕ 06.11.2021 ರಂದು ಪೀಠ-3ರ ಮುಂದೆ ಖುದ್ದು ಹಾಜರಾಗಿ ಲಿಖಿತ ಸಮಜಾಯಿಷಿ ಸಲ್ಲಿಸಿ, ಆಯೋಗದ ಮುಂದೆ ಸಾಕ್ಷಿದಾರರಾದ ಶ್ರೀ ಕಬ್ಬಾಳಯ್ಯ, ಪಾಸ್ಟರ್ ಶ್ರೀ ಸ್ಯಾಮ್ಯುಯಲ್ ಹಾಗೂ ಶ್ರೀಮತಿ ಸುಮಲತಾ ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಯನ್ನು ಪಡೆಯುವ ಸಲುವಾಗಿ ಸದರಿ ಸಾಕ್ಷಿದಾರರನ್ನು ಖುದ್ದು ಹಾಜರುಪಡಿಸಲು ಕಾಲಾವಕಾಶ ನೀಡಬೇಕೆಂದು ಕೇಳಿಕೊಂಡರೂ ಸಹ ತನಗೆ ಅವಕಾಶ ನೀಡಿರುವುದಿಲ್ಲ. ಕೇವಲ ದೂರುದಾರರ ಹೇಳಿಕೆಯನ್ನು ಮಾತ್ರ ಪರಿಗಣಿಸಿರುತ್ತೀರಿ, ಆದುದರಿಂದ ಮಾನ್ಯ ಆಯೋಗವು ತಾನು ಈ ಹೆಚ್.ಆರ್.ಸಿ. ಪ್ರಕರಣದಲ್ಲಿ ಆಪಾದಿತನಾಗಿರುವುದಿಲ್ಲ ಎಂದು ತಾನು ಸಾಬೀತುಪಡಿಸಲು ತನಗೆ ವಿಚಾರಣೆ ಕಾಲದಲ್ಲಿ ಮೊಬೈಲ್ ಮೂಲಕ ತಿಳಿಸಿರುವ ಅಂಶಗಳ ಆಧಾರದಲ್ಲಿ ಏಕಪಕ್ಷೀಯವಾಗಿ ತನ್ನ ವಿರುದ್ಧ ಆಪಾದನೆಯನ್ನು ಪರಿಗಣಿಸದೆ ಸಾಕ್ಷಿದಾರರಾದ ಶ್ರೀ ಕಬ್ಬಾಳಯ್ಯ, ಪಾಸ್ಟರ್ ಶ್ರೀ ಸ್ಯಾಮ್ಯುಯಲ್ ಹಾಗೂ ಶ್ರೀಮತಿ ಸುಮಲತಾ ರವರನ್ನು ವಿಚಾರಣೆಗೆ ಹಾಜರುಪಡಿಸಲು ತನಗೆ ಅವಕಾಶ ನೀಡಿ, ಖುದ್ದು ಸಾಕ್ಷಿದಾರರ ವಿಚಾರಣೆ ಮಾಡಿ ಸತ್ಯಾಸತ್ಯತೆಯನ್ನು ಪರಿಶೀಲಿಸಿ ನಂತರ ಮುಂದಿನ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

ತದನಂತರ, ದಿನಾಂಕ 04-12-2021 ರಂದು ಶ್ರೀ ಶಶಿಕುಮಾರ್ ರವರು ಆಯೋಗದ ಮುಂದೆ ಖುದ್ದು ಹಾಜರಾಗದೆ ಇದ್ದು ಹಾಗೂ ಶ್ರೀ ಶಶಿಕುಮಾರ್ ಎಂಬುವವರು ಪೋಲಿಸ್ ಸಿಬ್ಬಂದಿಯಲ್ಲವೆಂಬ ವಿಷಯವನ್ನು ಶ್ರೀ ಚಿಕ್ಕಣ್ಣ, ಆಯೋಗದ ಕೋರ್ಟ್ ಅಧಿಕಾರಿಯವರು ತಿಳಿಸಿದ್ದು, ಶ್ರೀಮತಿ ಅರ್ಚನ ಹಾಗೂ ಶ್ರೀ ನಾರಾಯಣಸ್ವಾಮಿರವರನ್ನು ಕೋಣನಕುಂಟೆ ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಲು ಒಬ್ಬ ಖಾಸಗಿ ವ್ಯಕ್ತಿಯನ್ನು ಹಾಗೂ ಆತನೊಂದಿಗೆ ಒಬ್ಬ ಮಹಿಳೆಯನ್ನು ಹೇಗೆ ಕಳುಹಿಸಿರುತ್ತಾರೆಂಬ ಬಗ್ಗೆ ವಿಚಾರಿಸಲು ಶ್ರೀ ಧರ್ಮೇಂದ್ರ, ಪೋಲಿಸ್ ಇನ್ಸ್‌ಪೆಕ್ಟರ್ ಹಾಗೂ ಅಂದಿನ ಪಿ.ಎಸ್.ಐ ಆದ ಶ್ರೀ ವೆಂಕಟೇಶಯ್ಯ ಹಾಲಿ ನಿವೃತ್ತ ರವರುಗಳಿಗೆ ನೋಟಿಸ್ ಜಾರಿ ಮಾಡಲು ಹಾಗೂ ಶ್ರೀ ಶಶಿಕುಮಾರ್‌ರವನ್ನು ದಿನಾಂಕ 13-12-2021 ರಂದು ಆಯೋಗದ ಮುಂದೆ ಹಾಜರಾಗಲು ಆದೇಶಿಸಿದ್ದು, ಅದರಂತೆ ದಿನಾಂಕ 13-12-2021 ರಂದು ಸದರಿಯವರುಗಳು ಹಾಗೂ ದೂರುದಾರರು ಹಾಗೂ ಆಕೆಯ ಗಂಡ ಶ್ರೀ ನಾರಾಯಣಸ್ವಾಮಿಯವರು ಆಯೋಗದ ಮುಂದೆ ಹಾಜರಾಗಿರುತ್ತಾರೆ. ಶ್ರೀ ಶಶಿಕುಮಾರ್ ರವರು ಅವರ ಹೇಳಿಕೆಯನ್ನು ಈ ಕೆಳಕಂಡಂತೆ ನೀಡಿರುತ್ತಾರೆ:

> "ಶ್ರೀಮತಿ ಅರ್ಚನ ಮತ್ತು ಅರ್ಚನ ರವರ ಗಂಡ ಶ್ರೀ ನಾರಾಯಣಸ್ವಾಮಿರವರು ನನಗೆ ಸುಮಾರು 15 ವರ್ಷಗಳಿಂದ ಪರಿಚಯವಿರುತ್ತಾರೆ. ಹಣದ ವಿಚಾರವಾಗಿ 4 ವರ್ಷದ ಹಿಂದೆ ಶ್ರೀಮತಿ ಅರ್ಚನ ಹಾಗೂ ಅವರ ಗಂಡ ಶ್ರೀ ನಾರಾಯಣಸ್ವಾಮಿ ರವರು ಅವರ

ಮನೆಯ ಮಾಲೀಕರಾದ ಶ್ರೀ ಆನಂದ್ ರವರ ಕಡೆಯಿಂದ ನನಗೆ 1 ಲಕ್ಷ ರೂ ಹಣವನ್ನು ಬಡ್ಡಿಗೆಂದು ನನಗೆ ತೆಗೆದುಕೊಟ್ಟಿದ್ದರು. 2 ತಿಂಗಳ ನಂತರ ನಾನು ಅವರಿಂದ ತೆಗೆದುಕೊಂಡ 1 ಲಕ್ಷ ರೂ ಹಣವನ್ನು ವಾಪಸ್ ಕೊಟ್ಟಿದ್ದೇನೆ. ಆದರೆ ಶ್ರೀಮತಿ ಅರ್ಚನ ರವರು ಶ್ರೀ ಆನಂದ್ ರವರಿಗೆ ಹಣವನ್ನು ಹಿಂದಿರುಗಿಸಿರುವುದಿಲ್ಲ.

ಇದೇ ರೀತಿ ಶ್ರೀಮತಿ ಅರ್ಚನ ರವರು ಸುಮಾರು 15 ಲಕ್ಷ ರೂ ಹಣವನ್ನು ಬೇರೆ ಬೇರೆ ಕಾರಣಗಳಿಂದ ನನ್ನ ಬಳಿ ತೆಗೆದುಕೊಂಡು, ಹಣವನ್ನು ವಾಪಸ್ ಮಾಡದೇ ನನಗೆ ಮೋಸ ಮಾಡಿದ್ದಾರೆ. ಆದರೆ ಶ್ರೀ ನಾರಾಯಣಸ್ವಾಮಿ ರವರ ತಂಗಿಯ ಮದುವೆ ಇದ್ದ ಕಾರಣ, ಮದುವೆ ಆದ ಮೇಲೆ ನನ್ನ ಹಣವನ್ನು ಸ್ವಲ್ಪ ಸ್ವಲ್ಪ ವಾಪಸ್ ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದರಿಂದ, ನಾನು ಮದುವೆ ಮುಗಿಯುವವರೆಗೂ ಕಾಯ್ದುಕೊಂಡೇ ಇದ್ದೆ. ಆದರೆ ಹಣ ಕೊಡದೇ ಶ್ರೀಮತಿ ಅರ್ಚನ ರವರು ಮನೆ ಬಿಟ್ಟು ಹೋಗಿದ್ದರು. ಆದರೆ ಅರ್ಚನ ರವರ ಗಂಡ ಶ್ರೀ ನಾರಾಯಣಸ್ವಾಮಿ ರವರು ನಾನು ಹಣ ಕೊಡುತ್ತೇನೆಂದು ಹೇಳಿ ಅವರೂ ಸಹ ಮನೆ ಬಿಟ್ಟು ಹೋಗಿದ್ದರು. ಈ ಮಧ್ಯೆ ಶ್ರೀಮತಿ ಜಾನ್ಹವಿ ಎನ್ನುವವರು ಠಾಣೆಗೆ ಹೋಗಿ ಶ್ರೀಮತಿ ಅರ್ಚನ ರವರು ಹಣ ಕೊಡುವ ವಿಚಾರವಾಗಿ ದೂರು ಕೊಟ್ಟಾಗ, ಆಗ ನನಗೆ ಗೊತ್ತಾಯಿತು ಇವರು ಸುಮಾರು ಜನರಿಗೆ ಹಣ ಕೊಡದೇ ಮೋಸ ಮಾಡಿದ್ದಾರೆಂದು.

ಆದಾದ ಮೇಲೆ ಶ್ರೀ ನಾರಾಯಣಸ್ವಾಮಿ ರವರ ತಂದೆ ಶ್ರೀಮತಿ ಅರ್ಚನ ರವರು ಎಲ್ಲಿ ಸಿಕ್ಕುತ್ತಾರೆ ಎಂದು ಹೇಳಿದರು. ಅದಕ್ಕೆ ನಾನು ಅವರನ್ನು ಹುಡುಕಿಕೊಂಡು ನಾನು ಹೋದೆ. ಆದರೆ ನಾನು ಪೊಲೀಸ್ ಆಗಿ ಹೋಗಿರಲಿಲ್ಲ. ಆದರೆ ಪೊಲೀಸರಿಗೆ ಶ್ರೀಮತಿ ಅರ್ಚನ ಹಾಗೂ ಅವರ ಗಂಡ ಶ್ರೀ ನಾರಾಯಣಸ್ವಾಮಿರವರು ಇಲ್ಲಿ ಇದ್ದಾರೆಂದು ದಿನಾಂಕ.23.01.2020ರಂದು ಸಂಜೆ 6.30 ಗಂಟೆಗೆ ತೋರಿಸಿದೆ. ನಾನು Travel Consultant ಮತ್ತು International Tour Manager ಆಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಮತ್ತು ಶ್ರೀ ನಾರಾಯಣಸ್ವಾಮಿ ಹಾಗೂ ಶ್ರೀಮತಿ ಅರ್ಚನ ರವರು ಸುಮಾರು 15 ವರ್ಷಗಳಿಂದ ಪರಿಚಯವಿದ್ದಾರೆ, ಅದಕ್ಕೆ ನಾನು ಪೊಲೀಸ್ ಆಗಿ ವ್ಯವಹರಿಸಲು ಸಾಧ್ಯವಿಲ್ಲ."

ದೂರು, ವರದಿ, ಅಭಿಪ್ರಾಯ, ಮರು ವಿಚಾರಣಾ ವರದಿ, ಹೇಳಿಕೆಗಳು ಹಾಗೂ ಸಂಭಂದಪಟ್ಟ ದಾಖಲಾತಿಗಳನ್ನು ಪರಿಶೀಲಿಸಲಾಗಿ, ದಿನಾಂಕ 23–01–2020 ರಂದು ಶ್ರೀಮತಿ ಅರ್ಚನ, ಆಕೆಯ ಗಂಡ ನಾರಾಯಣಸ್ವಾಮಿ ಹಾಗೂ ಮೊ.ಸಂ. 27/2020 ರ ದೂರುದಾರರಾದ ಶ್ರೀಮತಿ ಜಾಹ್ನವಿ ಹಾಗೂ ಇತರರು ಕೋಣನಕುಂಟೆ ಪೋಲಿಸ್ ಠಾಣೆಗೆ ಹಾಜರಾಗಿದ್ದು, ಶ್ರೀಮತಿ ಅರ್ಚನ ರವರ ವಿರುದ್ಧ ಕೇಸನ್ನು ದಾಖಲಿಸಿ, ಪೋಲಿಸ್ ಇನ್ಸ್‌ಪೆಕ್ಟರ್ ಶ್ರೀ ಧರ್ಮೆಂದ್ರರವರ ಸೂಚನೆಯ ಮೇರೆಗೆ ಶ್ರೀಮತಿ ಅರ್ಚನ ಹಾಗೂ ಶ್ರೀ ನಾರಾಯಣಸ್ವಾಮಿಯವರನ್ನು ವಿಚಾರಣೆಗೊಳಪಡಿಸಿ ನಂತರ ಶ್ರೀ ನಾರಾಯಣಸ್ವಾಮಿಯವರನ್ನು ಪೋಲಿಸ್ ಠಾಣೆಯಿಂದ ಕಳುಹಿಸಿಕೊಟ್ಟಿರುವುದಾಗಿ ಹಾಗೂ ಶ್ರೀಮತಿ ಅರ್ಚನರವರ ಮೇಲೆ ದೂರು

ನೀಡಿರುವ ವ್ಯಕ್ತಿಗಳು "ಆದರೆ ಅಲ್ಲೆ ಠಾಣೆಯ ಹೊರಗೆ ನೆರೆದಿದ್ದ ಜನರೆಲ್ಲರೂ ಶ್ರೀಮತಿ ಅರ್ಚನ ರವರನ್ನು ಹೊರಗಡೆ ಕಳುಹಿಸಿ ಕೊಡಿ, ಇವರಿಂದ ನಾವು ಹಣ ವಸೂಲಿ ಮಾಡಿಕೊಳ್ಳುತ್ತೇವೆಂದು ಕೂಗಾಡುತ್ತಿದ್ದರು. ಆ ಒಂದು ಕಾರಣಕ್ಕಾಗಿ ನಾನು ಶ್ರೀಮತಿ ಅರ್ಚನ ರವರ ಪ್ರಾಣಕ್ಕೆ ಅಪಾಯ ಆಗಬಹುದೆಂದು ಅರ್ಚನಾರವರನ್ನು ಸ್ಟೇಟ್ ಹೋಂ ಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಅಲ್ಲೆ ಇದ್ದ ಪಿರ್ಯಾದುದಾರರನ್ನು ಸಮಾಧಾನಪಡಿಸಿ ಮನೆಗೆ ಕಳುಹಿಸಿಕೊಟ್ಟಿರುತ್ತೇನೆ." ಎಂದು ಅಂದಿನ ಕೋಣನಕುಂಟೆ ಪೋಲಿಸ್ ಠಾಣೆಯ ಪಿ.ಎಸ್.ಐ.ಯಾದ ಶ್ರೀ ವೆಂಕಟೇಶಯ್ಯರವರ ಹೇಳಿಕೆಯಲ್ಲಿ ನುಡಿದಿರುತ್ತಾರೆ. ಆದರೆ ದಿನಾಂಕ 23-01-2020 ರಂದು ಕೋಣನಕುಂಟೆ ಪೋಲಿಸ್ ಠಾಣೆಯಲ್ಲಿ ಶ್ರೀಮತಿ ಜಾಹ್ನವಿರವರು ನೀಡಿರುವ ದೂರಿನ ಮೇರೆಗೆ, ಶ್ರೀಮತಿ ಅರ್ಚನ ಹಾಗೂ ಆಕೆಯ ಗಂಡ ಶ್ರೀ ನಾರಾಯಣಸ್ವಾಮಿರವರುಗಳನ್ನು ಸದರಿ ದಿನದಂದು ಸಂಜೆ ಕೋಣನಕುಂಟೆ ಪೋಲಿಸ್ ಠಾಣೆಯಲ್ಲಿ ವಿಚಾರಣೆಗೊಳಪಡಿಸಿದ ನಂತರ ಶ್ರೀಮತಿ ಅರ್ಚನ ಹಾಗೂ ಶ್ರೀ ನಾರಾಯಣಸ್ವಾಮಿರವನ್ನು ಬಿಡುಗಡೆ ಮಾಡದೆ, ಶ್ರೀ ನಾರಾಯಣಸ್ವಾಮಿರವರನ್ನು ಅಕ್ರಮವಾಗಿ ಠಾಣೆಯಲ್ಲೇ ಇರಿಸಿ ಹಾಗೂ ಶ್ರೀಮತಿ ಅರ್ಚನರವರನ್ನು ಸ್ಟೇಟ್ ಹೋಂಗೆ ಕಳುಹಿಸಿರುತ್ತಾರೆಂದು ಶ್ರೀಮತಿ ಅರ್ಚನ ಹಾಗೂ ಶ್ರೀ ನಾರಾಯಣಸ್ವಾಮಿರವರ ಹೇಳಿಕೆಗಳಲ್ಲಿ ಕಂಡುಬರುತ್ತದೆ. ಮುಂದುವರೆದು ಶ್ರೀಮತಿ ಅರ್ಚನ ರವರ ಮುಂದುವರೆದ ಹೇಳಿಕೆಯಲ್ಲಿ "ದಿನಾಂಕ.23.01.2020 ರಂದು ಕೋಣನಕುಂಟೆ ಪೊಲೀಸ್ ಠಾಣೆಯಿಂದ ನನ್ನನ್ನು ಸ್ಟೇಟ್ ಹೋಂ ಗೆ ಕಳುಹಿಸುವ ಅವಶ್ಯಕತೆ ಇರಲಿಲ್ಲ. ಏಕೆಂದರೆ ಠಾಣೆಯ ಹೊರಗೆ ನೆರೆದಿದ್ದ ಜನಗಳಿಂದ ನನಗೆ ಯಾವುದೇ ಪ್ರಾಣಾಪಾಯವಿರಲಿಲ್ಲ. ಏಕೆಂದರೆ ನಾನು ಚೀಟಿ ನಡೆಸುತ್ತಿದ್ದ ಜನಗಳಿಗೆ ನನ್ನ ಮನೆ ಗೊತ್ತಿದೆ. ಅವರುಗಳು ನನಗೆ ಯಾವುದೇ ತೊಂದರೆ ಕೊಡುತ್ತಿರಲಿಲ್ಲ." ಎಂದು ಕಂಡು ಬರುತ್ತದೆ.

ಶ್ರೀ ವೆಂಕಟೇಶಯ್ಯ ಪಿ.ಎಸ್.ಐ. ಹಾಲಿ ನಿವೃತ್ತ ರವರ ಹೇಳಿಕೆಯಲ್ಲಿ "ದಿನಾಂಕ 24-01-2020 ರಂದು ಸ್ಟೇಟ್ ಹೋಂ ನಿಂದ ಶ್ರೀಮತಿ ಅರ್ಚನ ರವರನ್ನು ಕರೆಸಿ, ಸದರಿಯವರನ್ನು ವಿಚಾರಣೆ ನಡೆಸಿದ್ದು, ಅವರ ತಪ್ಪೊಪ್ಪಿಗೆಯಂತೆ ಅವರ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ. ಹಾಗೂ ಅದೇ ದಿನ ಮಧ್ಯಾಹ್ನ 1.30 ಗಂಟೆಗೆ ಶ್ರೀ ನಾರಾಯಣಸ್ವಾಮಿ ರವರನ್ನು ಹೆಚ್.ಸಿ-8051 ಶ್ರೀ ಚಿಕ್ಕಕೆಂಪಯ್ಯ ನವರು ಠಾಣೆಗೆ ಹಾಜರುಪಡಿಸಿದ ಮೇರೆಗೆ ಅವರ ವಿರುದ್ಧವೂ ಸಹ ದಸ್ತಗಿರಿ ಕ್ರಮ ಅನುಸರಿಸಿದ್ದೇನೆ. ಹಾಗೂ ಪಿ.ಐ. ರವರ ಆದೇಶದಂತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೂ ಹಲವು ಸಾಕ್ಷಿದಾರರನ್ನು ಬರಮಾಡಿಕೊಂಡು ಕೇಸಿನ ಬಗ್ಗೆ ತನಿಖೆ ನಡೆಸಿ, ಅದೇ ದಿನ ಶ್ರೀಮತಿ ಅರ್ಚನ ರವರನ್ನು ಪುನಃ ಸ್ಟೇಟ್ ಹೋಂ ಗೆ ಕಳುಹಿಸಿಕೊಡಲಾಯಿತು" ಎಂದು ನುಡಿದಿರುತ್ತಾರೆ. ಆದರೆ ದಿನಾಂಕ 23-01-2020 ರಂದು ಶ್ರೀಮತಿ ಅರ್ಚನ ಶ್ರೀ ನಾರಾಯಣಸ್ವಾಮಿಯವರನ್ನು ಕೋಣನಕುಂಟೆ ಪೋಲಿಸ್ ಠಾಣೆಯಲ್ಲಿ ವಿಚಾರಣೆಗೊಳಪಡಿಸಿ ಸದರಿ ದಿನದಿಂದ ದಿನಾಂಕ 24-01-2020 ರಂದು ಕಾನೂನಿನ್ವಯ ದಸ್ತಗಿರಿ ಮಾಡುವ ತನಕ

ದೂರುದಾರರನ್ನು ಹಾಗೂ ಆಕೆಯ ಗಂಡನನ್ನು ಅಕ್ರಮ ಬಂಧನದಲ್ಲಿ ಇಟ್ಟಿರುವುದಾಗಿ ಶ್ರೀಮತಿ ಅರ್ಚನಾ, ಶ್ರೀ ನಾರಾಯಣಸ್ವಾಮಿ ಹಾಗೂ ಆಯೋಗದ ಪೋಲಿಸ್ ಮಹಾನಿರೀಕ್ಷಕರ ವರದಿಯಲ್ಲಿ ಕಂಡುಬಂದಿರುತ್ತದೆ.

ಅಂದಿನ ಕೋಣನಕುಂಟೆ ಪೊಲೀಸ್ ಠಾಣೆಯ ಪೋಲಿಸ್ ಇನ್ಸ್‌ಪೆಕ್ಟರ್ ಶ್ರೀ ಧರ್ಮೆಂದ್ರ ಟಿ. ಎನ್. ಹಾಲಿ ಪೋಲಿಸ್ ಇನ್ಸ್‌ಪೆಕ್ಟರ್, ವಿ.ವಿ.ಐ.ಪಿ ಭದ್ರತೆ ವಿಭಾಗ, ಬೆಂಗಳೂರು ರವರ ಹೇಳಿಕೆಯಲ್ಲಿ ದಿನಾಂಕ 23-01-2020 ರಂದು ಶ್ರೀಮತಿ ಅರ್ಚನಾರವರನ್ನು ರಾಜ್ಯ ಮಹಿಳಾ ನಿಲಯಕ್ಕೆ ಕಳುಹಿಸಿಕೊಟ್ಟಿರುವ ಬಗ್ಗೆ ಶ್ರೀ ವೆಂಕಟೇಶಯ್ಯರವರು ತನಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲವೆಂದು ಹಾಗೂ ದಿನಾಂಕ 24-01-2020 ರಂದು ಶ್ರೀಮತಿ ಅರ್ಚನಾರವನ್ನು ರಾಜ್ಯ ಮಹಿಳಾ ನಿಲಯಕ್ಕೆ ಕಳುಹಿಸಿಕೊಟ್ಟಿರುವ ಬಗ್ಗೆ ಶ್ರೀ ವೆಂಕಟೇಶಯ್ಯರವರು ತನಗೆ ಮಾಹಿತಿಯನ್ನು ನೀಡಿರುತ್ತಾರೆಂದು ನುಡಿದಿರುತ್ತಾರೆ.

ಅಂದಿನ ಕೋಣನಕುಂಟೆ ಪೊಲೀಸ್ ಠಾಣೆಯ ಪಿ.ಎಸ್.ಐ. ಶ್ರೀ ವೆಂಕಟೇಶಯ್ಯ ರವರು ದೂರುದಾರರನ್ನ ಹಾಗೂ ಆಕೆಯ ಗಂಡನನ್ನು ದಿನಾಂಕ 23.01.2020 ರಂದು ಸಂಜೆಯಿಂದ ದಿನಾಂಕ 24.01.2020ರಂದು ಕಾನೂನಿ ಪ್ರಕಾರ ದಸ್ತಗಿರಿ ಮಾಡುವ ತನಕ ಸದರಿಯವರುಗಳನ್ನು ಅಕ್ರಮ ಬಂಧನದಲ್ಲಿರಿಸಿ ಅವರ ಅಧಿಕಾರ ದುರುಪಯೋಗ ಪಡಿಸಿಕೊಂಡಿರುವುದು ಕಂಡುಬರತ್ತದೆ. ಹಾಗೂ ಅಂದಿನ ಕೋಣನಕುಂಟೆ ಪೊಲೀಸ್ ಠಾಣೆಯ ಶ್ರೀ ಧರ್ಮೇಂದ್ರ, ಹಾಲಿ ಪೊಲೀಸ್ ಇನ್ಸ್‌ಪೆಕ್ಟರ್ ವಿವಿಐಪಿ, ಭದ್ರತಾ ವಿಭಾಗ, ಬೆಂಗಳೂರು ನಗರ ರವರು ಸದರಿ ವಿಷಯದ ಬಗ್ಗೆ ಶ್ರೀ ವೆಂಕಟೇಶಯ್ಯನವರ ಮೇಲೆ ಕಾನೂನಿನ ರೀತಿ ಕ್ರಮ ಜರುಗಿಸದೇ ಕರ್ತವ್ಯ ನಿರ್ಲಕ್ಷತನ ತೋರಿರುವುದು ಕಂಡು ಬಂದಿರುತ್ತದೆ.

ಶ್ರೀ ವೆಂಕಟೇಶಯ್ಯನವರು ಹಾಲಿ ನಿವೃತ್ತ ದಿನಾಂಕ.23.01.2020 ರಂದು ಶ್ರೀಮತಿ ಅರ್ಚನ ರವರನ್ನು ರಾಜ್ಯ ಮಹಿಳಾ ನಿಲಯದಲ್ಲಿ ಹಾಗೂ ಶ್ರೀ ನಾರಾಯಣಸ್ವಾಮಿ ರವರನ್ನು ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ಅಕ್ರಮವಾಗಿ ಇರಿಸಿರುವುದು ಕಂಡು ಬಂದ ಕಾರಣ ಅಂದಿನ ಕೋಣನಕುಂಟೆ ಪೊಲೀಸ್ ಠಾಣೆ ಪಿ.ಎಸ್.ಐ ಶ್ರೀ ವೆಂಕಟೇಶಯ್ಯ ರವರು ಹಾಲಿ ನಿವೃತ್ತಿ ಹೊಂದಿರುವ ಕಾರಣದಿಂದಾಗಿ ಇಲಾಖಾ ವಿಚಾರಣೆ ಮಾಡಲು Karnataka Civil Services Rules ರ ಅಡಿಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬಹುದಾಗಿ ಡಿಜಿ ಮತ್ತು ಐಜಿಪಿ, ಬೆಂಗಳೂರು ರವರಿಗೆ ಶಿಫಾರಸ್ಸು ಮಾಡಲಾಗಿದೆ.

ಅಂದಿನ ಕೋಣನಕುಂಟೆ ಪೊಲೀಸ್ ಠಾಣೆಯ ಶ್ರೀ ಧರ್ಮೇಂದ್ರ, ಹಾಲಿ ಪೊಲೀಸ್ ಇನ್ಸ್‌ಪೆಕ್ಟರ್ ವಿವಿಐಪಿ, ಭದ್ರತಾ ವಿಭಾಗ, ಬೆಂಗಳೂರು ನಗರ ರವರು ಪ್ರಕರಣದ ವಿಷಯದ ಬಗ್ಗೆ

ಶ್ರೀ ವೆಂಕಟೇಶಯ್ಯನವರ ಮೇಲೆ ಯಾವುದೇ ರೀತಿಯ ಕಾನೂನು ಕ್ರಮ ಜರುಗಿಸದೇ ಕರ್ತವ್ಯ ನಿರ್ಲಕ್ಷತನ ತೋರಿರುವುದು ಕಂಡು ಬಂದ ಕಾರಣ, ಶ್ರೀ ಧರ್ಮೇಂದ್ರ ರವರು ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಲು ಉಪ ಪೊಲೀಸ್ ಆಯುಕ್ತರು, ದಕ್ಷಿಣ ವಿಭಾಗ, ಬೆಂಗಳೂರು ರವರು ನಿರ್ದೇಶನ ನೀಡುವಂತೆ ಶಿಫಾರಸ್ಸು ಮಾಡಲಾಗಿದೆ.

ಆದೇಶದ ಪ್ರತಿಯನ್ನು ಡಿಜಿ ಮತ್ತು ಐಜಿಪಿ, ಬೆಂಗಳೂರು ಹಾಗೂ ಉಪ ಪೊಲೀಸ್ ಆಯುಕ್ತರು, ದಕ್ಷಿಣ ವಿಭಾಗ, ಬೆಂಗಳೂರು ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಅನುಪಾಲನಾ ವರದಿಯನ್ನು ಡಿಜಿ ಮತ್ತು ಐಜಿಪಿ, ಬೆಂಗಳೂರು ಹಾಗೂ ಉಪ ಪೊಲೀಸ್ ಆಯುಕ್ತರು, ದಕ್ಷಿಣ ವಿಭಾಗ, ಬೆಂಗಳೂರು ರವರುಗಳು ಆಯೋಗಕ್ಕೆ ಸಲ್ಲಿಸತಕ್ಕದ್ದು ಮತ್ತು ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರು ನಿಯಮ 22 ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಪ್ರಕ್ರಿಯೆ) ನಿಯಮಾವಳಿ 2020 ರಂತೆ ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ.

ಪ್ರಕರಣವನ್ನು ದಿನಾಂಕ 20–04–2022 ರಂದು ಅನುಪಾಲನಾ ವರದಿಗಾಗಿ ಮಂಡಿಸುವುದು.

Sd/-
(ಆರ್.ಕೆ.ದತ್ತ)
ಸದಸ್ಯರು

ಜಿ.ಎಸ್